ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಡಿಸೆಂಬರ್ 2025 ಮಾಸ ಪತ್ರಿಕೆ

ಸಂಪುಟ/Volume : 48
ಸಂಚಿಕೆ/Issue : 3
ಪುಟ/Pages : 20
ಬೆಲೆ/Price : ₹ 15/–

Akhila Karnataka Shikshaka Samachar | December 2025 | Monthly



ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ

## ಧರ್ಮ ಧ್ವಜಾರೋಹಣ



## ವಂದೇ ಮಾತರಂ

150 ನೇ ವರ್ಷಾಚರಣೆಯ ಸಂಭ್ರಮ

A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಆತ್ಮೀಯರೇ,

ಭಗವದ್ಗೀತೆಯು ಹಿಂದುಗಳ ಪವಿತ್ರ ಗ್ರಂಥವಾಗಿದೆ. ಯುದ್ಧ ಭೂಮಿಯಲ್ಲಿ ಶ್ರೀ ಕೃಷ್ಣನ ಸಲಹೆ, ಅರ್ಜುನನಿಗೆ ದೊರೆತ ಸಂದೇಶಗಳು ಹಾಗೂ ಬೋಧನೆಗಳ ಸಾರವೇ ಭಗವದ್ಗೀತೆ. ಈ ವರ್ಷ ದೇಶ ವಿದೇಶಗಳಲ್ಲಿ ಗೀತಾ ಜಯಂತಿಯನ್ನು ಡಿಸೆಂಬರ್-01ರಂದು ಆಚರಿಸುವರು. ಈ ದಿನದಿಂದ ನಿರಂತರವಾಗಿ ಗೀತೆಯನ್ನು ಪಠಣ ಮಾಡುವುದರಿಂದ ಶ್ರೀ ಕೃಷ್ಣನ ಅನುಗ್ರಹ ದೊರೆಯುತ್ತದೆ ಎಂಬುದು ನಂಬಿಕೆ. ಗೀತಾ ಸಾರವನ್ನು ಮಕ್ಕಳಾದಿಯಾಗಿ ಎಲ್ಲರಿಗೂ ತಿಳಿಸುವ ಜವಾಬ್ದಾರಿ ನಮ್ಮದು. ಏಕೆಂದರೆ ಭಗವದ್ಗೀತೆಯು ಮನುಷ್ಯರ ಆಲೋಚನೆಗಳನ್ನು ಶುದ್ಧೀಕರಿಸುತ್ತದೆ. ಒಳ್ಳೆಯದ್ದು ಮತ್ತು ಕೆಟ್ಟದ್ದರ ನಡುವಿನ ವ್ಯತ್ಯಾಸವನ್ನು ಅರಿಯಬಹುದು. ಭಗವದ್ಗೀತೆಯಲ್ಲಿರುವ ಸಂದೇಶವನ್ನು ಸರಿಯಾಗಿ ಅನುಸರಿಸಿದರೆ, ಮಾನಸಿಕ ಸ್ಥೈರ್ಯ ಮತ್ತು ದೃಢ ವಿಶ್ವಾಸ ಉಂಟಾಗುವುದು. ಆದ್ದರಿಂದ ವಿದ್ಯಾರ್ಥಿಗಳಿಗೆ ಈ ವಿಷಯಗಳನ್ನು ಮನವರಿಕೆ ಮಾಡಿಕೊಡುವುದು ಶಿಕ್ಷಕರ ಕರ್ತವ್ಯವೂ ಆಹುದೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿಯು ನವೆಂಬರ್ 16ರಂದು ಕೇಂದ್ರ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಶಿಕ್ಷಕ ಸಂಘದ ಸಂರಕ್ಷಕರಾಗಿದ್ದ ಮಾನ್ಯ ನರಹರಿಯವರಿಗೆ ಶಿಕ್ಷಕ ಸಂಘದ ಹಿರಿಯರು, ಪದಾಧಿಕಾರಿಗಳು ಹಾಗೂ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಶ್ರದ್ಧಾಸುಮನಗಳನ್ನು ತಮ್ಮ ನುಡಿನಮನಗಳ ಮೂಲಕ ಸಮರ್ಪಿಸಿದರು.

ರಾಷ್ಟ್ರೀಯ ಗ್ರಾಹಕ ದಿನವನ್ನು ಪ್ರತಿವರ್ಷ ಡಿಸೆಂಬರ್ 24ರಂದು ಆಚರಿಸಲಾಗುತ್ತದೆ. ನಮ್ಮ ಭಾರತದ ಗ್ರಾಹಕ ಸಂರಕ್ಷಣಾ ಕಾನೂನು ದೋಷಪೂರಿತ ಪದಾರ್ಥಗಳು, ವ್ಯಾಪಾರದಲ್ಲಿ ಮೋಸ, ವಂಚನೆ, ನಿರ್ಲಕ್ಷ್ಯ ಇವುಗಳಿಂದ ರಕ್ಷಿಸಲು ಸಹಾಯವಾಗುತ್ತಿದೆ. ದೇಶದ ಗ್ರಾಹಕರ ಸಂರಕ್ಷಣೆಯು ಸರ್ಕಾರದ ಕರ್ತವ್ಯ ಮಾತ್ರವಲ್ಲ, ಇದು ಗ್ರಾಹಕರ ಜವಾಬ್ದಾರಿಯೂ ಕೂಡ ಆಗಿರುತ್ತದೆ. ಗ್ರಾಹಕರು ಸ್ವದೇಶಿ ವಸ್ತುಗಳನ್ನು ಕೊಂಡುಕೊಳ್ಳುವುದರ ಮೂಲಕ ದೇಶದ ಅಭಿವೃದ್ಧಿಗೆ ಸಹಕಾರಿಗಳಾಗುವುದು ಕೂಡ ಮುಖ್ಯವಾಗಿದೆ.

ವಿದ್ಯಾರ್ಥಿಗಳು ವಿವಿಧ ಶಾಲಾ ಹಂತದ ಪರೀಕ್ಷೆಗಳನ್ನು ಎದುರಿಸುತ್ತಿದ್ದೀರಿ ಹಾಗೂ ಪ್ರಗತಿಯನ್ನು ಕೂಡ ಸಾಧಿಸುತ್ತಿದ್ದೀರಿ. ಮುಖ್ಯವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಮುಂಬರುವ ತಿಂಗಳುಗಳಲ್ಲಿ ಎದುರಾಗುವ ಪರೀಕ್ಷೆಗಳಿಗಾಗಿ ಸಿದ್ಧತೆಗಳನ್ನು ನಡೆಸುವುದು ಅವಶ್ಯಕವಾಗಿದೆ. ಅದಕ್ಕಾಗಿ ಪೂರ್ವ ಸಿದ್ಧತೆಗಳನ್ನು ಶಿಕ್ಷಕರ ಮಾರ್ಗದರ್ಶನದಂತೆ ಮಾಡುವುದರಿಂದ ಯಶಸ್ಸು ಸಾಧಿಸುತ್ತೀರಿ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪ್ರಯತ್ನ ನಿರಂತರವಾಗಿ ಸಾಗಲಿ ಹಾಗೂ ಫಲಪ್ರದವಾಗಲಿ ಎಂಬುದು ಮಾಧ್ಯಮಿಕ ಶಿಕ್ಷಕ ಸಂಘದ ಆಶಯವಾಗಿದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜಿ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಗೀತಾ ಜಯಂತಿ – ವಿದ್ವಾನ್ ನಾರಾಯಣ ಭಟ್ಟ 3
- 'ಆನಂದಮಠ'ಎಂಬ ವಿಶಿಷ್ಟ ಕಾದಂಬರಿ – ನಂ. ನಾಗಲಕ್ಷ್ಮಿ 4
- 'ವಂದೇ ಮಾತರಂ' ಜನಕ 'ಬಂಕಿಮ ಚಂದ್ರ' – ಹೆಚ್. ನಾಗಭೂಷಣ ರಾವ್ 5
- ಧರ್ಮ ಧ್ವಜಾರೋಹಣ – ಡಾ॥ ಲೋಕೇಶ್ 6
- ಶ್ರೀ ಕೃ ನರಹರಿಯವರಿಗೆ ಶ್ರದ್ಧಾಂಜಲಿ ಮತ್ತು ರಾಜ್ಯ ಕಾರ್ಯಕಾರಿಣಿ ವರದಿ – ನಾರಾಯಣ ಭಟ್ಟ 7
- ಭಾರತೀಯ ಇತಿಹಾಸದ ವಿಕೃತೀಕರಣ 8
- ವಂದೇ ಮಾತರಂ 11
- ಚಿತ್ರಸುದ್ದಿ 12

॥ ಶ್ರೀ ಕೃಷ್ಣಪರಮಾತ್ಮನೇ ನಮಃ ॥

# ಗೀತಾ ಜಯಂತಿ



**ವಿದ್ವಾನ್ ನಾರಾಯಣ ಭಟ್ಟ**
ರಾಜ್ಯ ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



ಪ್ರತಿವರ್ಷವೂ ಮಾರ್ಗಶೀರ್ಷ ಮಾಸದ ಶುಕ್ಲ ಪಕ್ಷದ ಏಕಾದಶೀ ದಿನ ಗೀತಾ ಜಯಂತಿ ಆಚರಣೆಯನ್ನು ನಾವೆಲ್ಲರೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮಾಡುತ್ತೇವೆ. ಅಂದು ಗೀತೆ ಹುಟ್ಟಿದ ದಿನ. ಅಂದರೆ ಮಹಾಭಾರತ ಯುದ್ಧ ನಡೆದ ಸಂದರ್ಭ, ಸಮರಾಂಗಣದಲ್ಲಿಯೇ ಶ್ರೀ ಕೃಷ್ಣನು ಅರ್ಜುನನಿಗೆ ತನ್ನ ಕರ್ತವ್ಯವನ್ನು ಎಚ್ಚರಿಸಲು ಮಾಡಿದ ಮಾರ್ಗದರ್ಶನವೇ "ಗೀತೋಪದೇಶ."

**ಹಿನ್ನೆಲೆ :–** ಭಾರತೀಯರಾದ ನಮಗೆಲ್ಲರಿಗೂ ಅತ್ಯಂತ ಪವಿತ್ರ ಗ್ರಂಥ ಶ್ರೀಮದ್ಭಗವದ್ಗೀತಾ. ಇದರಲ್ಲಿ 18 ಅಧ್ಯಾಯಗಳಿವೆ, 700 ಶ್ಲೋಕಗಳಿವೆ. ಕುರುಕ್ಷೇತ್ರದಲ್ಲಿ ಕೌರವರ ಪಾಳೆಯದಲ್ಲಿರುವ ಬಂಧು ಬಳಗ, ವಿದ್ಯೆ ಕಲಿಸಿದ ಗುರುಗಳು, ದಾಯಾದಿಗಳು ಇವರನ್ನೆಲ್ಲಾ ಕಂಡು ಅರ್ಜುನನು ಮೋಹಪಾಶಕ್ಕೆ ಒಳಗಾಗುತ್ತಾನೆ ಮತ್ತು ಯುದ್ಧ ಮಾಡುವುದಿಲ್ಲವೆಂದು ಶಸ್ತ್ರತ್ಯಾಗ ಮಾಡುತ್ತಾನೆ. ಆ ಸಂದರ್ಭದಲ್ಲಿ ಸಾಕ್ಷಾತ್ ಭಗವಂತನೇ ಆದ ಶ್ರೀಕೃಷ್ಣನು ಹತ್ತು ಹಲವು ಅಂಶಗಳನ್ನು ಉಲ್ಲೇಖಿಸಿ, ಅರ್ಜುನನ ಅಧೈರ್ಯವನ್ನು ಹಾಗೂ ವೈರಾಗ್ಯವನ್ನು ದೂರ ಮಾಡುತ್ತಾನೆ. ಕೊನೆಯಲ್ಲಿ "ಯಥೇಚ್ಛಸಿ ತಥಾ ಕುರು" ಎಂಬುದಾಗಿ ತನ್ನ ಮಾತಿಗೆ ವಿರಾಮ ಹೇಳುತ್ತಾನೆ.

ಶಿಕ್ಷಕ ವೃತ್ತಿಯಲ್ಲಿರುವ ನಾವು ಈ ಭಗವದ್ಗೀತೆಯನ್ನು ಯಾವ ದೃಷ್ಟಿಯಿಂದ ನೋಡಿದರೆ ಉತ್ತಮ? ಎಂಬುದನ್ನು ಇಲ್ಲಿ ಲೇಖನದ ವ್ಯಾಪ್ತಿಯನ್ನು ಮೀರದೆ ವಿಮರ್ಶಿಸೋಣ.

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಈ ಮೂರು ಪ್ರಮುಖ ವಿಭಾಗಗಳಿವೆ. ಭಗವದ್ಗೀತೆಯನ್ನು ಗೀತಾ ಶಾಸ್ತ್ರ, ಮೋಕ್ಷ ಶಾಸ್ತ್ರ, ಜೀವನ ಧರ್ಮಯೋಗ ಹೀಗೆಂದು ಕರೆಯುತ್ತಾರೆ. ಶಿಕ್ಷಣ ತಜ್ಞರು ಮನಶ್ಶಾಸ್ತ್ರ ಎಂದೂ ಕರೆಯುತ್ತಾರೆ. ಜೀವನವೇ ಒಂದು ಸಮರಾಂಗಣ. ಇಲ್ಲಿ ಪ್ರತಿನಿತ್ಯವೂ ನಾವು ಕೆಲವು ದ್ವಂದ್ವಗಳನ್ನು ಕಾಣುತ್ತೇವೆ. ಈ ದ್ವಂದ್ವ ನಿವಾರಣೆಗೆ ಭಗವದ್ಗೀತೆ ಜೀವನದ ಕೈಪಿಡಿಯಾಗಿದೆ. ಸಮುದ್ರದಲ್ಲಿ ಅಲೆಗಳು ಒಂದರ ಹಿಂದೆ ಒಂದು ಬರುವ ಹಾಗೆ ಮಾನವರಾದ ನಮ್ಮ ಬದುಕಿನಲ್ಲಿ ಮೇಲಿಂದ ಮೇಲೆ ಅನೇಕ ಸಂಕಷ್ಟಗಳು ಎದುರಾಗುವುದು ಅತ್ಯಂತ ಸಹಜವಾದ ಕ್ರಿಯೆ.

ಭಗವದ್ಗೀತೆಯ ಸಾರವನ್ನು ಗಮನಿಸಿದಾಗ, ನಮ್ಮಲ್ಲಿರುವ ದೌರ್ಬಲ್ಯವನ್ನು ದೂರ ಮಾಡಿ, ಆತ್ಮವಿಶ್ವಾಸವನ್ನು ತುಂಬುವ ಕ್ರಿಯೆ ಮೌನವಾಗಿ ನಡೆಯುವುದನ್ನು ಕಾಣುತ್ತೇವೆ. ಅರ್ಜುನ ಕೇವಲ ನಿಮಿತ್ತ ಮಾತ್ರ. ಗೀತೆಯಲ್ಲಿ ಹೇಳಿದ ಎಲ್ಲಾ ವಿಚಾರಗಳೂ ಇಂದೂ ಸಹ ಅತ್ಯಂತ ಪ್ರಸ್ತುತವಾಗಿವೆ. ಅವುಗಳಲ್ಲಿ ಕೆಲವು ಅಂಶಗಳ ಕುರಿತು ದೃಷ್ಟಿ ಹಾಯಿಸೋಣ.

**ವಿಶೇಷತೆ :– ಯಜ್ಞ, ದಾನ, ತಪಸ್ಸು (ಇಲ್ಲಿ ಯಜ್ಞ ಎಂಬುದಕ್ಕೆ ಪೂಜೆ ಎಂಬರ್ಥ.) । ಧರ್ಮ, ಅರ್ಥ, ಕಾಮ, ಮೋಕ್ಷ – ಚತುರ್ವಿಧ ಪುರುಷಾರ್ಥಗಳ ಸಾಧನೆ । ಮಾನವನ ಸ್ವಭಾವ – ಸಾತ್ವಿಕ, ರಾಜಸ, ತಾಮಸ । ಎಲ್ಲರ ಅಂತರಂಗದ ಅಂತರಾಳದಲ್ಲಿ ಪರಬ್ರಹ್ಮ ನೆಲೆಸಿದ್ದಾನೆ. ಮಾನವ ಸಾಧಕನಾಗಬೇಕು, ಅದಕ್ಕೆ ಅಪರಿಮಿತವಾದ ನಂಬಿಕೆ, ಶ್ರದ್ಧೆ ಅತ್ಯಗತ್ಯ. । ಗೀತೆಯ ಅಧ್ಯಯನದಿಂದ ನಮಗೆ ಜೀವನದರ್ಶನವಾಗುತ್ತದೆ. । ಸ್ವಧರ್ಮೇ ನಿಧನಂ ಶ್ರೇಯಃ, ಶ್ರದ್ಧಾವಾನ್ ಲಭತೇ ಜ್ಞಾನಮ್ । ದೈವೀ ಸಂಪತ್ತು, ಆಸುರೀ ಸಂಪತ್ತುಗಳ ವಿವೇಚನೆ. ಇಂದ್ರಿಯಗಳ ಗುಣ ಸ್ವಭಾವ. । ವಿಶ್ವರೂಪ ದರ್ಶನ.**

ಹೀಗೆ ಹತ್ತಾರು ಆಯಾಮಗಳ ಹಿನ್ನೆಲೆಯಲ್ಲಿ ಭಗವದ್ಗೀತೆಯು ಅತ್ಯಂತ ಸ್ಪಷ್ಟವಾಗಿ ಮತ್ತು ಸುಲಭವಾಗಿ ಎಲ್ಲಾ ಜೀವನಾವಶ್ಯಕ ಸಂಗತಿಗಳನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರಾದ ನಾವು ನಮ್ಮ ಅಪಾರ ಸಂಖ್ಯೆಯ ಶಿಷ್ಯರನ್ನು ಉದ್ದೇಶಿಸಿ, ಗೀತೆಯ ಸಾರವನ್ನು ಬೋಧಿಸೋಣ. ತನ್ಮೂಲಕ, ಪ್ರಸ್ತುತ ಸನ್ನಿವೇಶದಲ್ಲಿ ಬಹು ಬೇಗನೆ ಹತಾಶೆಗೆ ಒಳಗಾಗುವ ವಿದ್ಯಾರ್ಥಿಗಳ ದೌರ್ಬಲ್ಯವನ್ನು ದೂರ ಮಾಡೋಣ.

**ಉಪಸಂಹಾರ :–** ಇಂದಿನ ಶಿಕ್ಷಣ ವ್ಯವಸ್ಥೆಯ ಆಳ-ಅಗಲದ ಪರಿಕಲ್ಪನೆ ನಮಗೆಲ್ಲರಿಗಿದೆ. ವಿದ್ಯಾರ್ಥಿಗಳು ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳದೇ ಅನೇಕ ದುಷ್ಪಟಗಳಿಗೆ ಬಲಿಯಾಗುತ್ತಿದ್ದಾರೆ. ಜೀವನದ ಗುರಿ ಏನೆಂಬುದನ್ನು ಮರೆತು, ಕ್ಷಣಿಕ ತೃಪ್ತಿಗಾಗಿ ವಿವಿಧ ವ್ಯಸನಗಳು ತಮ್ಮ ನಿತ್ಯ ಬದುಕಿನ ಪ್ರವೃತ್ತಿಗಳಲ್ಲಿ ಒಂದು ಎಂಬ ಭ್ರಮಾ ಲೋಕದಲ್ಲಿ ವಿಹರಿಸುತ್ತಿರುವುದು ನಿಜಕ್ಕೂ ಆಘಾತಕಾರಿ ಬೆಳವಣಿಗೆ. ಈ ಎಲ್ಲಾ ಅಪಸವ್ಯಗಳ ನಿವಾರಣೆಗೆ ಭಗವದ್ಗೀತೆ ಅದ್ಭುತ ದಿವ್ಯೌಷಧ ಎಂಬುದಾಗಿ ಮನಗಂಡು ಪ್ರತಿದಿನ ಕೆಲವು ಗೀತಾ ಶ್ಲೋಕಗಳನ್ನಾದರೂ ಓದಿ ಅರ್ಥ ಮಾಡಿಕೊಳ್ಳೋಣ ಹಾಗೂ ಅರ್ಥಮಾಡಿಸೋಣ. ನಮ್ಮೆಲ್ಲರ ಮನೆಯಲ್ಲಿ ಭಗವದ್ಗೀತೆ ಇರಲಿ. ಆಗ ನಮ್ಮ ಮನದಲ್ಲಿ ಸಹಜವಾಗಿಯೇ ಗೀತಾಸಾರ ಮನೆ ಮಾಡುತ್ತದೆ. ಹೀಗೆ ಗೀತೆಯನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಗೀತಾ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರಲು ಸಾಧ್ಯ.

**॥ ಶ್ರೀ ಕೃಷ್ಣಾರ್ಪಣಮಸ್ತು॥**

# ‘ಆನಂದಮಠ’ಎಂಬ ವಿಶಿಷ್ಟ ಕಾದಂಬರಿ

**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**



‘ವಂದೇಮಾತರಂ’ಎಂಬ ದೇಶಪ್ರೇಮವನ್ನು ಮೂಡಿಸುವ ಅದ್ಭುತವಾದ ಗೀತೆಯನ್ನು ದೇಶದ ಜನತೆಗೆ ನೀಡಿದ ಕಾದಂಬರಿ ‘ಆನಂದಮಠ’.

18 ನೇ ಶತಮಾನದ ಅಂತ್ಯದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ವಿರುದ್ಧ ನಡೆದ ಸನ್ಯಾಸಿ ಕ್ರಾಂತಿಯನ್ನು ಮತ್ತು 1770ರ ಬಂಗಾಳದ ಭೀಕರ ಬರಗಾಲವನ್ನು ಆಧಾರವಾಗಿಟ್ಟುಕೊಂಡು ಈ ಕಾದಂಬರಿಯ ರಚನೆಯಾಯಿತು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟಗಳಲ್ಲಿ ಈ ಕೃತಿಯು ಮಹತ್ವದ ಪಾತ್ರವನ್ನು ವಹಿಸಿದೆ. ಭಾರತದ ರಾಷ್ಟ್ರೀಯತೆಯ ಪ್ರತೀಕವೆಂದೇ ಭಾವಿಸಿರುವ ‘ವಂದೇ ಮಾತರಂ’ ಗೀತೆಯು ಈ ಕಾದಂಬರಿಯ ಒಂದು ಮುಖ್ಯ ಭಾಗವಾಗಿದೆ. ಇದು ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಬಂಗಾಳಿ ಭಾಷೆಯಲ್ಲಿ ಬರೆದ ಕಾದಂಬರಿ. ‘ಬಂಗದರ್ಶನ್’ ಎಂಬ ನಿಯತಕಾಲಿಕದಲ್ಲಿ ಧಾರಾವಾಹಿಯಾಗಿ ಮೊದಲು ಪ್ರಕಟಗೊಂಡ ಈ ಕಾದಂಬರಿಯು 1882 ರಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಯಿತು.

ಈ ಕಾದಂಬರಿಯನ್ನು ಮೊದಲಿಗೆ ಕನ್ನಡಕ್ಕೆ ಅನುವಾದಿಸಿದವರು ಕನ್ನಡ ಕಾದಂಬರಿಗಳ ಪಿತಾಮಹರೆಂದೇ ಪ್ರಸಿದ್ಧರಾದ ಬಿ.ವೆಂಕಟಾಚಾರ್ಯ. ಕನ್ನಡದಲ್ಲಿ ಕಾದಂಬರೀ ಪ್ರಕಾರವನ್ನು ಹೊಸದಾಗಿ ಪರಿಚಯಿಸುತ್ತಿದ್ದ ಪ್ರಯತ್ನದಲ್ಲಿ ಅದುವರೆಗಾಗಲೇ ಅದು ಬಳಕೆಯಲ್ಲಿದ್ದ ಬಂಗಾಳಿ ಮತ್ತು ಮರಾಠಿ ಭಾಷೆಯ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯದಲ್ಲಿ ಕ್ರಮವಾಗಿ ಬಿ.ವೆಂಕಟಾಚಾರ್ಯರು ಮತ್ತು ಗಳಗನಾಥರು ತೊಡಗಿದ್ದರು. ಆ ಸಮಯದಲ್ಲಿ ಬಂಗಾಳಿಯಿಂದ ಕನ್ನಡಕ್ಕೆ ಬಂದ ಕೃತಿಯೇ ‘ಆನಂದಮಠ’. ಮಾತೃಭೂಮಿಯ ಬಗೆಗೆ ಅನನ್ಯವಾದ ಗೌರವ, ಪ್ರೀತಿ, ಭಕ್ತಿಯನ್ನು ಮೂಡಿಸುವ, ದೇಶಪ್ರೇಮವನ್ನು ತುಂಬುವ ಒಂದು ಅದ್ಭುತವಾದ ಗೀತೆ ‘ವಂದೇ ಮಾತರಂ’. ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರೇರೇಪಿಸುವಂತಹ ಈ ಗೀತೆಯ ರಚನಕಾರರು ಬಂಗಾಳಿ ಕವಿ ಬಂಕಿಮಚಂದ್ರಚಟರ್ಜಿಯವರು. ಈ ಗೀತೆ ಭಾರತದ ರಾಷ್ಟ್ರೀಯ ಗೀತೆಯಾಗಿ ಘೋಷಿಸಲ್ಪಟ್ಟಿತ್ತು. ಬ್ರಿಟಿಷ್ ಸರ್ಕಾರ ಈ ಪುಸ್ತಕದ ಮೇಲೆ ನಿಷೇಧವನ್ನು ಹೇರಿದ್ದು, ಭಾರತ ಸ್ವಾತಂತ್ರ್ಯ ಗಳಿಸಿದ ಮೇಲೆ ನಿಷೇಧವನ್ನು ಹಿಂತೆಗೆಯಲಾಯಿತು.

‘ಆನಂದಮಠ’ ಒಂದು ರಾಜಕೀಯ ಕಾದಂಬರಿ. ಬ್ರಿಟಿಷರ ಆಡಳಿತದ ವಿರುದ್ಧ ಬಂಡಾಯವೇಳಲು ನಿರ್ಧರಿಸಿದ ಬಂಗಾಳದ ಸನ್ಯಾಸಿಗಳ ತಂಡವು ಯಾವುದೇ ಸೈನಿಕ ತರಬೇತಿಯಿಲ್ಲದಿದ್ದರೂ, ಅಗತ್ಯವಾದ ಶಸ್ತ್ರಗಳ ಸೌಲಭ್ಯವಿಲ್ಲದಿದ್ದರೂ ದೇಶಪ್ರೇಮ ಮತ್ತು ಆತ್ಮವಿಶ್ವಾಸವೆಂಬ ಆಯುಧಗಳ ಹಾಗೂ ಸಂಘಟನೆಯ ಬಲದೊಂದಿಗೆ ಬ್ರಿಟಿಷರ ವಿರುದ್ಧ ಹೋರಾಡುವ ಕೆಚ್ಚನ್ನು ತೋರಿದ್ದೇ ಇದರ ಕಥಾವಸ್ತು. ಕನ್ನಡದಲ್ಲಿ ಇದು ಕಾದಂಬರಿಯಾಗಿ ಬಂದಾಗ ಓದುಗರ ಅಪಾರ ಮೆಚ್ಚುಗೆಯನ್ನು ಪಡೆದುಕೊಂಡಿತ್ತು. ನಂತರದಲ್ಲಿ 1952 ರಲ್ಲಿ ಈ ಕಾದಂಬರಿಯನ್ನು ಆಧರಿಸಿ ಹಿಂದೀ ಭಾಷೆಯಲ್ಲಿ ‘ಆನಂದಮಠ’ ಎಂಬ ಹೆಸರಿನಲ್ಲಿ ಚಲನಚಿತ್ರವೂ ಬಿಡುಗಡೆಗೊಂಡಿತು. 2007ರಲ್ಲಿ ಎಸ್. ಆರ್. ರಾಮಸ್ವಾಮಿಯವರು ಕನ್ನಡದ ಅನುವಾದವನ್ನು ಮತ್ತೆ ಮಾಡಿದರು. ಒಟ್ಟಾರೆಯಾಗಿ ಹೇಳಬೇಕೆಂದರೆ ‘ಆನಂದಮಠ’ ಒಂದು ಐತಿಹಾಸಿಕ ಕಾದಂಬರಿಯಾಗಿ ಕನ್ನಡ ಕಾದಂಬರೀ ಕ್ಷೇತ್ರದಲ್ಲಿ ಒಂದು ಮಹತ್ವದ ಸ್ಥಾನವನ್ನು ಹೊಂದಿದೆ.

‘ಆನಂದಮಠ’ ಕಾದಂಬರಿಯು ಮಹೇಂದ್ರ, ಕಲ್ಯಾಣಿ, ಸತ್ಯಾನಂದ, ಜೀವಾನಂದ, ಭವಾನಂದ ಮತ್ತು ಶಾಂತಿ ಎಂಬ ಮುಖ್ಯ ಪಾತ್ರಗಳ ಸುತ್ತ ನಡೆಯುವ ಕಥೆಯಾಗಿದೆ. ಮಹೇಂದ್ರ ಮತ್ತು ಕಲ್ಯಾಣಿ ದಂಪತಿ ಜಮೀನ್ದಾರರ ಕುಟುಂಬಕ್ಕೆ ಸೇರಿದವರಾಗಿದ್ದರೂ ಬರಗಾಲದ ಕಾರಣದಿಂದ ಊರನ್ನೇ ಬಿಟ್ಟು ಹೊರಡುವ ಪರಿಸ್ಥಿತಿ ಉಂಟಾಗುತ್ತದೆ. ಹೀಗೆ ಪುಟ್ಟ ಮಗುವಿನೊಂದಿಗೆ ಊರಿನಿಂದ ಹೊರಟವರು ದಾರಿಯಲ್ಲಿ ಅರಣ್ಯವೊಂದರಲ್ಲಿ ಸಿಲುಕಿ ಮಹೇಂದ್ರ ಒಂದು ಕಡೆ, ಕಲ್ಯಾಣಿ ಮತ್ತು ಮಗು ಒಂದು ಕಡೆಯಾಗಿ ಬಿಡುತ್ತಾರೆ. ಮಹೇಂದ್ರನಿಗೆ ಬ್ರಿಟಿಷರ ವಿರುದ್ಧ ಬಂಡಾಯವೆದ್ದಿದ್ದ ಕ್ರಾಂತಿಕಾರಿ ಸನ್ಯಾಸಿಗಳ ತಂಡವೊಂದು ಎದುರಾಗಿ ಅವನೂ ಅವರೊಂದಿಗೆ ಸೇರಿಕೊಳ್ಳುತ್ತಾನೆ. ದರೋಡೆಕೋರರಿಂದ ತಪ್ಪಿಸಿಕೊಂಡ ಕಲ್ಯಾಣಿ ಆಯಾಸದಿಂದ ಒಂದು ಕಡೆ ಎಚ್ಚರತಪ್ಪಿ ಬಿದ್ದಿರುವುದನ್ನು ಕಂಡ ಸನ್ಯಾಸಿಯೊಬ್ಬ ಅವಳನ್ನು ಉಪಚರಿಸಿ, ಮಗುವಿನೊಂದಿಗೆ ಕರೆದೊಯ್ದು ತನ್ನ ತಂಗಿಯೊಂದಿಗೆ ಬಿಡುತ್ತಾನೆ. ಮಹೇಂದ್ರ ಕ್ರಾಂತಿಕಾರಿಗಳ ತಂಡವಾದ ಆನಂದಮಠವೆಂಬ ಸಂಸ್ಥೆಯ ಮುಖ್ಯಸ್ಥ ಸತ್ಯಾನಂದರ ನೇತೃತ್ವದಲ್ಲಿ ಸನ್ಯಾಸಿ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾನೆ. ಮುಂದೆ ಆಕಸ್ಮಿಕವಾಗಿ ಮಹೇಂದ್ರ ಮತ್ತು ಕಲ್ಯಾಣಿ ಹಾಗು ಮಗು ಮೂವರೂ ಸನ್ಯಾಸಿಗಳ ನೆರವಿನಿಂದಲೇ ಒಟ್ಟಿಗೆ ಸೇರುತ್ತಾರೆ. ಸನ್ಯಾಸಿಗಳ ಮುಖ್ಯಸ್ಥ ಮಹೇಂದ್ರನಿಗೆ ತಾವೆಲ್ಲರೂ ಆರಾಧಿಸುವ ಭಾರತಮಾತೆಯ ಮೂರು ವಿಭಿನ್ನ ರೂಪಗಳ ದರ್ಶನವನ್ನು ಮಾಡಿಸುತ್ತಾನೆ. 1. ಭಾರತಮಾತೆಯ ಗತವೈಭವದ ಭವ್ಯವಾದ ರೂಪ. 2. ಮಾತೆಯು ತನ್ನ ನೆಲದಲ್ಲಿ ತಲೆದೋರಿರುವ ಬರಗಾಲ ಮತ್ತು ಆರ್ಥಿಕ ಸಂಕಷ್ಟದ ಕಾರಣದಿಂದ ಧರಿಸಿದ ಕಾಳಿಯ ರೂಪ 3. ಭವಿಷ್ಯದ ಭಾರತಮಾತೆಯನ್ನು ಕಾಣಬೇಕೆಂದಿರುವ ದುರ್ಗಾಮಾತೆಯ ರೂಪ. ಮಹೇಂದ್ರನಲ್ಲಿ ದೇಶಭಕ್ತಿಯು ಜಾಗೃತಗೊಳ್ಳುತ್ತದೆ.

ಸನ್ಯಾಸಿ ಹೋರಾಟಗಾರರ ತಂಡವು ದಿನೇದಿನೇ ವೃದ್ಧಿಸುತ್ತಾ ತನ್ನದೊಂದು ಭದ್ರನೆಲೆಯನ್ನೂ ನಿರ್ಮಿಸಿಕೊಳ್ಳುತ್ತದೆ. ಆ ಕೋಟೆಯನ್ನು ನಾಶಪಡಿಸಲು ಮುಂದಾದ ಈಸ್ಟ್ ಇಂಡಿಯಾ ಕಂಪೆನಿಯವರ ಸೈನ್ಯವನ್ನು ಎದುರಿಸಿ ಹೋರಾಡಲು ತಕ್ಕ ಸೈನಿಕ ತರಬೇತಿಯಾಗಲೀ, ಆಯುಧಗಳಾಗಲೀ ಇಲ್ಲದ ಕಾರಣದಿಂದ ಸನ್ಯಾಸಿಗಳ ತಂಡದಲ್ಲಿ ಬಹಳಷ್ಟು ಸಾವು, ನೋವುಗಳುಂಟಾಗುತ್ತವೆ. ಆದರೂ ಅಳಿದುಳಿದ ಕೆಲವೇ ಸನ್ಯಾಸಿಗಳು ಬ್ರಿಟಿಷರ ತುಪಾಕಿಗಳನ್ನು ವಶಪಡಿಸಿಕೊಳ್ಳುವಲ್ಲಿ ಸಫಲರಾಗಿ, ಅವರನ್ನು ಪರಾಭವಗೊಳಿಸಿ ಹಿಮ್ಮೆಟ್ಟುವಂತೆ ಮಾಡುತ್ತಾರೆ.

**ಪುಟ 10 ಕ್ಕೆ ➤**

**ನಿಷ್ಠೆ, ಉದ್ದೇಶದ ಪಾವಿತ್ರ್ಯ ಇವು ಕಾಲಕ್ರಮೇಣ ಗೆಲ್ಲುವುದರಲ್ಲಿ ಸಂದೇಹವಿಲ್ಲ – ಸ್ವಾಮಿ ವಿವೇಕಾನಂದ**

# ‘ವಂದೇ ಮಾತರಂ’ ಜನಕ ‘ಬಂಕಿಮ ಚಂದ್ರ’

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ವಂದೇ ಮಾತರಂ – ‘ತಾಯಿ ನಿಮಗಿದೋ ವಂದನೆ’ ಇದು ಯಾವುದೋ ಎರಡು ಪದಗಳನ್ನು ಜೋಡಿಸಿದ ಪುಟ್ಟ ವಾಕ್ಯ ಅಲ್ಲ, ರಾಜಕೀಯ ಘೋಷಣೆಯೂ ಅಲ್ಲ, ಕೇವಲ ಒಂದು ಹಾಡಿನ ಮೊದಲ ಸಾಲೂ ಅಲ್ಲ, ಹಾಗಾದರೆ ಕೋಟಿ ಕೋಟಿ ಭಾರತೀಯರ ಹೃದಯಗಳನ್ನು ತಟ್ಟಿದ, ಬಂಧನದಲ್ಲಿದ್ದ ತಾಯಿಯ ಮುಕ್ತಿಯನ್ನು ಬಯಸಿ ರಕ್ತ ತರ್ಪಣಕ್ಕೂ ಸಿದ್ಧರಾದ, ನೇಣುಗಂಬದ ಕುಣಿಕೆಗೆ ಕೊರಳೊಡ್ಡಲು ನಗುನಗುತ್ತಾ ಸಾಗುತ್ತಿದ್ದ ಸಾಲು ಸಾಲು ತರುಣರು ಉಲಿಯುತ್ತಿದ್ದ ‘ದಿವ್ಯ ಮಂತ್ರ’ ಭಾರತಾಂಬೆಯ ಪೂಜೆಯ ‘ರಾಷ್ಟ್ರಮಂತ್ರ’ ಯಾರಿದರ ಉದ್ಗಾತ?

ಅವರೇ ಋಷಿಸದೃಶ ಕವಿ ‘ಬಂಕಿಮಚಂದ್ರ’. ವಂದೇ ಮಾತರಂ ಹಾಡಿ ತಾಯಿಯ ಸಂಕೋಲೆಗಳನ್ನು ಕಡಿದುಹಾಕಲು ಅಂದು ಸ್ವಾತಂತ್ರ್ಯ ಹೋರಾಟಗಾರರಿಗೆ ಚೇತನ ಕೊಟ್ಟ, ಇಂದು ತಾಯಿ ಭಾರತಿಯನ್ನು ವಿಶ್ವಗುರುವಾಗಿಸಲು ನಮಗೆಲ್ಲಾ ಪ್ರೇರಣೆ ನೀಡುತ್ತಿರುವ ‘ಕವಿಚಂದ್ರ’

ಬಾಬು ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಬಂಗಾಲಿ ಗದ್ಯ ಸಾಹಿತ್ಯವನ್ನು ಸೃಜಿಸಿದ ಮಹಾನ್ ಕವಿ. ಅವರು ಜನಿಸಿದ್ದು 1838ರ ಜೂನ್ 27ರಂದು. ಅವಿಭಜಿತ ಬಂಗಾಳದ 24 ಪರಗಣಾ ಜಿಲ್ಲೆಗೆ ಸೇರಿದ ಒಂದು ಪುಟ್ಟ ಗ್ರಾಮ ‘ಕಾಂಬಾಲಪಾಡ’ದಲ್ಲಿ. ತಂದೆ ಯಾದವಚಂದ್ರ ಚಟ್ಟೋಪಾಧ್ಯಾಯ, ತಾಯಿ ದುರ್ಗಾದೇವಿ. ಬಂಕಿಮರು 3 ಜನ ಗಂಡುಮಕ್ಕಳಲ್ಲಿ ಕೊನೆಯವರು. ಅವರ ಓರ್ವ ಅಣ್ಣ ‘ಸಂಜೀವ ಚಂದ್ರ ಚಟ್ಟೋಪಾಧ್ಯಾಯ ಸಹಾ ಒಬ್ಬ ಕಾದಂಬರಿಕಾರ. ಅವರ ತಂದೆ ಮೇದಿನಿಪುರ(ಮಿಡ್ನಾಪುರ) ದಲ್ಲಿ ಸರಕಾರಿ ಅಧಿಕಾರಿ.

‘ಬೆಳೆಯುವ ಪೈರು ಮೊಳಕೆಯಲ್ಲಿ’ ಎಂಬ ಗಾದೆಯ ಮಾತಿನಂತೆ ಬಾಲಕ ಬಂಕಿಮ ಇಡೀ ವರ್ಣಮಾಲೆಯನ್ನು ಒಂದೇ ದಿನದಲ್ಲಿ ಕಲಿತ ಪ್ರತಿಭಾಶಾಲಿ. ಅದೂ ಒಂದು ಸಲ ಹೇಳಿಸಿಕೊಂಡು ಅವನೋರ್ವ ‘ಏಕಸಂಧಿಗ್ರಾಹಿ’ ಅವನೊಬ್ಬ ಪ್ರತಿಭೆಯ ಪ್ರತಿಮೂರ್ತಿ. ಶಾಲೆಯಲ್ಲಿ ಶಿಕ್ಷಕರು ಉಳಿದ ಮಕ್ಕಳಿಗೆ ‘ನೀವೂ ಬಂಕಿಮನಂತಾಗಿ’ ಎಂದು ಪ್ರೋತ್ಸಾಹಿಸುತ್ತಿದ್ದರು. ಇಷ್ಟು ಹೇಳಿದರೆ ಸಾಕು ಅವನೆಂಥಾ ಪ್ರತಿಭಾಶಾಲಿ ಎಂದು ಅರ್ಥವಾದೀತು.

ಶಾಲೆಯ ಎಲ್ಲ ಪರೀಕ್ಷೆಗಳೂ ಬಂಕಿಮನಿಗೆ ನೀರು ಕುಡಿದಂತೆ. ಎಲ್ಲ ತರಗತಿಗಳಲ್ಲೂ ಅವನೇ ಮುಂದು. ಮೊದಲು ಹೂಗ್ಲಿಯ ಮೊಹಸಿನ್ ಕಾಲೇಜು, ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಿಂದ ಪದವಿಪ್ರಾಪ್ತಿ. ಕಾಲೇಜು ಶಿಕ್ಷಣದ ಜತೆಗೇ ಸಂಸ್ಕೃತ ಶಿಕ್ಷಣ. ನಾಲ್ಕೂ ವರ್ಷಗಳಲ್ಲಿಯೇ ಅದರಲ್ಲೂ ಪ್ರಭುತ್ವ, 20ನೇ ವಯಸ್ಸಿಗೇ ಜಸ್ಸೂರ್‌ನಲ್ಲಿ ಡೆಪ್ಯುಟಿ ಮಾಜಿಸ್ಟ್ರೇಟ್ ಹುದ್ದೆ, ನ್ಯಾಯ ನಿಷ್ಠುರೂ ಹಾಗೂ ನಿರ್ಭಯ ವೃತ್ತಿಯಿಂದಾಗಿ ಪದೇ ಪದೇ ಬಿಳಿಯ ಅಧಿಕಾರಿಗಳೊಂದಿಗೆ ತಿಕ್ಕಾಟ ನಡೆಸಬೇಕಾಯಿತು. ಆದರೆ ತನ್ನ ಜನರಿಗೆ ನ್ಯಾಯ ತಂದುಕೊಡುವಲ್ಲಿ, ದಮನಕಾರರಿಗೆ ಬುದ್ಧಿಕಲಿಸುವಲ್ಲಿ ಎಂದೂ ಹಿಂದೆಬೀಳದ ವ್ಯಕ್ತಿತ್ವ ಅವರದ್ದು. ಅದಕ್ಕಾಗೇ ಪದೇ ಪದೇ ವರ್ಗಾವಣೆ. ಇದೇ ರೀತಿ 33 ವರ್ಷ ನೌಕರಿ ಮಾಡಿ ನಿವೃತ್ತನಾದ ನಂತರ ಬದುಕಿದ್ದು ಕೇವಲ ಮೂರು ವರ್ಷ ಮಾತ್ರ. 1894ರ ಏಪ್ರಿಲ್ 8ರಂದು ಬಂಕಿಮರು ಕಲ್ಕತ್ತದಲ್ಲಿ ಸ್ವರ್ಗಸ್ಥರಾದರು.

ಬಂಕಿಮರಿಗೆ ಭಗವದ್ಗೀತೆ ಎಂದರೆ ಪಂಚ ಪ್ರಾಣ. ಕಡೆಗಾಲದಲ್ಲಿ ರೋಗಗ್ರಸ್ತರಾಗಿದ್ದರು. ವೈದ್ಯರು ಔಷಧಿ ತೆಗೆದುಕೊಳ್ಳಲು ಒತ್ತಾಯಿಸಿದಾಗ ನನ್ನ ಔಷಧಿಯೇ ಬೇರೆ ಎಂದರು. ಅದೇನೆಂದು ವೈದ್ಯರು ತೋರಿಸಲು ಆಗ್ರಹಿಸಿದಾಗ ಅವರು ತೋರಿಸಿದ್ದು ಭಗವದ್ಗೀತೆ ಪುಸ್ತಕ! ಭಗವದ್ಗೀತೆಯ ತತ್ವಗಳೇ ಅವರ ಅನೇಕ ಗ್ರಂಥಗಳ ಆಧಾರ. ಅವರ ಜೀವನಾಧಾರ ಸಹ ‘ಗೀತೆಯೇ’॥ “ಬಂಕಿಮರ ಐತಿಹಾಸಿಕ ಕಾದಂಬರಿಗಳಾದ ‘ಆನಂದಮಠ’, ದೇವಿಚಾದುರಾಣಿ’, ‘ಸೀತಾರಾಮ’ ಗಳಲ್ಲಿನ ಹೂರಣವೆಲ್ಲವೂ ಭಗವದ್ಗೀತೆಯ ತತ್ವಗಳಾದ ಆದರ್ಶ, ಕರ್ಮ, ಧರ್ಮ, ಸಂನ್ಯಾಸಗಳೇ ಆಗಿವೆ” ಎಂದು ಕನ್ನಡದ ಶ್ರೇಷ್ಠ ಸಾಹಿತಿಗಳಾದ ಎ.ಆರ್.ಕೃಷ್ಣಶಾಸ್ತ್ರಿಯವರು ಬರೆದಿದ್ದಾರೆ.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು 1857ರಲ್ಲಿ. ಆಗಿನ್ನೂ ಬಂಕಿಮ 19 ವರ್ಷದ ಬಿಸಿರಕ್ತದ ತರುಣ. ಸ್ವಾಭಿಮಾನ ಸಂಪನ್ನನಾಗಿ, ಸ್ವದೇಶಾಭಿಮಾನಿಯಾಗಿ ಬೆಳೆದ. ಆತನಿಗೆ ಅಂದಿನ ಕಾಲದ ದೇಶದ ಪರಿಸ್ಥಿತಿ ಮನಕಲಕದಿರಲು ಸಾಧ್ಯವೇ ಇಲ್ಲ. ನೂರಾರು ವರ್ಷಗಳ ದಾಸ್ಯದಿಂದ ಇದೇ ಸಮಾಜ ರಾಜಕೀಯ ದಾಸ್ಯ, ವಿಚಾರ ದಾಸ್ಯಗಳಿಂದ ಜರ್ಜರಿತವಾಗಿತ್ತು. ನಮ್ಮ ದಿವ್ಯ ಪರಂಪರೆಯ ಕೊಂಡಿ ಕಳಚಿತ್ತು, ಅವರ ಹೃದಯ ಸಿಡಿಮದ್ದಿನ ಗೂಡಾಗಿತ್ತು. “ಹೇಗಾದರೂ ಈ ಆತ್ಮಗ್ಲಾನಿಯನ್ನು ಮನೆ ಮನಗಳಿಂದ ಹೊರಗೆಸೆಯಬೇಕು, ನಮ್ಮ ಭೂಮಿಯ ರಾಷ್ಟ್ರ ಜೀವನದ ಭೂತ ಹಾಗೂ ಭವಿಷ್ಯತ್ತನ್ನು ಬೆಸೆಯಬೇಕು. ನಮ್ಮ ಪುಣ್ಯ ಪರಂಪರೆಯನ್ನು ಅಮೃತಧಾರೆಯನ್ನು ಜನಮಾನಸದಲ್ಲಿ ಹರಿಸಿ ಸ್ವಾತಂತ್ರ್ಯದ ಬೀಜ ಬಿತ್ತಿ ಮೊಳೆಯಿಸಬೇಕು” ಎಂಬ ನಿರ್ಧಾರ ಹೃದಯದಲ್ಲಿ ಹೆಪ್ಪುಗಟ್ಟಿತ್ತು.

ಯುದ್ಧರಂಗದಲ್ಲಿ ಗಾಂಡೀವ ಕೆಳಗಿಟ್ಟು ಭ್ರಮಿಷ್ಠನಾಗಿದ್ದ ಅರ್ಜುನನಿಗೆ, ಗೀತಾಚಾರ್ಯ ಹೇಳಿದ ಮಾತುಗಳನ್ನು ಭಾರತೀಯರಿಗೆ ಮತ್ತೆ ಹೇಳಬೇಕು. ದೇಶದ ಸ್ವಾತಂತ್ರ್ಯ ಕಾರ್ಯ ‘ಕರ್ಮಯೋಗ’, ಸ್ವಾರ್ಥ ತೊರೆದು ದೇಶಭಕ್ತಿಯನ್ನು ಉದ್ದೀಪನಗೊಳಿಸುವುದು ‘ಭಕ್ತಿಯೋಗ’ ಹೋರಾಟಕ್ಕೆ ಧುಮುಕುವುದು ‘ಕರ್ಮಯೋಗ’ ಆಗಬೇಕು ಎಂಬ ನವಸಂದೇಶವನ್ನು ನೀಡಬೇಕು. ಆದರೆ ಹೇಗೆ? ಅದಕ್ಕೆ ಸುಲಭ ಮಾರ್ಗವೆಂದರೆ ಮನುಷ್ಯನಲ್ಲಿರುವ ಸ್ವಾರ್ಥ, ಸುಖಭೋಗ, ಸಂಸಾರದ ಚಿಂತೆ ಮುಂತಾದ ವ್ಯಾಮೋಹಗಳಿಗಿಂತ ದೊಡ್ಡದಾದ ಧ್ಯೇಯವನ್ನು ಅವನ ಮುಂದಿಡಬೇಕು. ಸಣ್ಣ ಗೆರೆಯನ್ನು ದೊಡ್ಡದು ಮಾಡಲು ಅದರ ಮುಂದೆ ದೊಡ್ಡ ಗೆರೆ ಎಳೆಯಬೇಕು ಎಂಬಂತೆ ಅವರಿಗೆ ಹೊಳೆದದ್ದು “ಕೋಟಿ ಕೋಟಿ ಹೃದಯಗಳನ್ನು ಬೆಸೆಯಬಲ್ಲ ಮಾತೃಭೂಮಿ ಭಾರತಾಂಬೆಯ ಚಿತ್ರ. ಆ ಮಹಾಮಾತೆಯ ವೈಭವಪ್ರಾಪ್ತಿಗಾಗಲಿ ನಮ್ಮೆಲ್ಲ ತನು–ಮನ–ಧನ ಪ್ರಾಣ

**ಪುಟ 10 ಕ್ಕೆ ➤**

# ಧರ್ಮ ಧ್ವಜಾರೋಹಣ

**ಡಾ॥ ಲೋಕೇಶ್**
ಮುಖ್ಯಸ್ಥರು & ಸಂಯೋಜನಾಧಿಕಾರಿಗಳು
'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು



ಭಗವಾನ್ ಶ್ರೀರಾಮಚಂದ್ರ ಭಾರತ, ಭಾರತೀಯರು ಮತ್ತು ಭಾರತೀಯತೆಯ ಅಸ್ಮಿತೆ. ಭಾರತೀಯ ಜೀವನ ಕ್ರಮದ ಮೌಲ್ಯಗಳು ಭಗವಾನ್ ಶ್ರೀರಾಮಚಂದ್ರನ ಆದರ್ಶ ಬದುಕು ಮತ್ತು ವ್ಯಕ್ತಿತ್ವದ ಫಲವಾಗಿ ಭಾರತೀಯ ಜನಮಾನಸದಲ್ಲಿ ಬೆರೆತು ಹೋಗಿವೆ. ಅಯೋಧ್ಯೆಯ ರಾಮಮಂದಿರದ ಕಾರ್ಯ ಪೂರ್ಣಗೊಂಡ ಹಿನ್ನೆಲೆಯಲ್ಲಿ ನವೆಂಬರ್ 25, 2025ರಂದು ಆದರಣೀಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಅಮೃತಹಸ್ತದಿಂದ ಧ್ವಜಾರೋಹಣ ಕಾರ್ಯವನ್ನು ನೆರವೇರಿಸಲಾಯಿತು. ಇಂತಹ ಶುಭ ಅಮೃತ ಗಳಿಗೆಯು ಮಾರ್ಗಶಿರ ಶುಕ್ಲ ಪಂಚಮಿ ತಿಥಿಯ, ಸಮಯ ಬೆಳಿಗ್ಗೆ 11.58 ರಿಂದ ಮಧ್ಯಾಹ್ನ 1.00 ಗಂಟೆಯಾಗಿತ್ತು. ಎರಡು ಮಹತ್ವದ ಘಟನೆಗಳಿಂದ ಈ ದಿನ ವಿಶೇಷ ಎನಿಸಿತ್ತು. ಮೊದಲನೆಯದಾಗಿ ಇದು ತ್ರೇತಾಯುಗದಲ್ಲಿ ಪ್ರಭು ಶ್ರೀರಾಮಚಂದ್ರ ಹಾಗೂ ಸೀತಾಮಾತೆಯ ವಿವಾಹವಾದ ದಿನವನ್ನು ಸ್ಮರಿಸಿತ್ತು ಹಾಗೂ ಎರಡನೆಯದಾಗಿ ಅಯೋಧ್ಯೆಯಲ್ಲಿ ಸತತ 48 ಗಂಟೆಗಳ ಕಾಲ ಅಖಂಡ ತಪಸ್ಸು ಕೈಗೊಂಡ ಸಿಖ್ ಗುರು ತೇಗ ಬಹದ್ದೂರರ ಬಲಿದಾನದ ದಿನವು ಸಹ ಆಗಿತ್ತು. ಆದ್ದರಿಂದ ಇಂತಹ ಮುಹೂರ್ತದಲ್ಲಿ ಧ್ವಜಾರೋಹಣ ಮಂಗಳ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು.

ರಾಮಮಂದಿರದ ಗರ್ಭಗುಡಿಯಲ್ಲಿರುವ ರಾಮಲಲ್ಲಾ ವಿಗ್ರಹದ ಪ್ರಾಣಪ್ರತಿಷ್ಠಾಪನೆಯಾಗಿದ್ದು ಜನವರಿ 22, 2024 ರಂದು ಇದು ದೇವರಿಗೆ ಜೀವಶಕ್ತಿಯನ್ನು ತುಂಬುವುದು ಮತ್ತು ಪೂಜೆಯನ್ನು ಪ್ರಾರಂಭಿಸುವುದನ್ನು ಸೂಚಿಸುತ್ತದೆ. ಆದಾಗ್ಯೂ ಧ್ವಜಾರೋಹಣವು ಮಂದಿರದ ವಾಸ್ತುಶಿಲ್ಪದ ಪೂರ್ಣಗೊಳಿಸುವಿಕೆಯನ್ನು ಸೂಚಿಸುತ್ತದೆ. ಶಾಸ್ತ್ರದ ಪ್ರಕಾರ ಇದು ಎರಡನೇಯ ಪ್ರಾಣಪ್ರತಿಷ್ಠೆಯಾಗಿದೆ. ಮಂದಿರದ ಸಂಪೂರ್ಣ ರಚನೆಯ ಸಕ್ರಿಯಗೊಳಿಸುವಿಕೆಯ ಪ್ರಕ್ರಿಯೆಯ ಪ್ರತೀಕವೇ ಧ್ವಜಾರೋಹಣ. ಇಂತಹ ಆಚರಣೆಯ ಸಂದರ್ಭದಲ್ಲಿ ಮಂದಿರದ 44 ಬಾಗಿಲುಗಳನ್ನು ಸಹ ತೆರೆಯಲಾಗುತ್ತದೆ.

ಧರ್ಮಧ್ವಜವು ಹತ್ತು ಅಡಿ ಎತ್ತರ, ಇಪ್ಪತ್ತು ಅಡಿ ಉದ್ದದ ತ್ರಿಕೋನ ಆಕಾರದಲ್ಲಿದ್ದು, ಅದರಲ್ಲಿರುವ ವಿಕಿರಣ ಸೂಸುವ ಸೂರ್ಯನ ಚಿತ್ರವು ಭಗವಾನ್ ರಾಮನ ತೇಜಸ್ಸು ಮತ್ತು ಶೌರ್ಯದ ಪ್ರತೀಕವಾಗಿದೆ. ಧ್ವಜದಲ್ಲಿ ಕೋವಿದರ ಮರ ಮತ್ತು ಓಂ ಅನ್ನು ಚಿತ್ರಿಸಲಾಗಿದೆ. ಸೂರ್ಯನ ಚಿತ್ರವು ಭಗವಾನ್ ರಾಮನ ಸೂರ್ಯವಂಶಾವಳಿ ಮತ್ತು ಶಾಶ್ವತ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಓಂ ವಿಶ್ವದ ಆಧ್ಯಾತ್ಮಿಕ ಕಂಪನವನ್ನು ಪ್ರತಿನಿಧಿಸುತ್ತದೆ. ಕೋವಿದರ ಮರವು ಶುದ್ಧತೆ, ಸಮೃದ್ಧಿ ಮತ್ತು ರಾಮರಾಜ್ಯವನ್ನು ಪ್ರತಿನಿಧಿಸುತ್ತದೆ. ಕೋವಿದರ ಮರವು ವಾಲ್ಮೀಕಿ ರಾಮಾಯಣದ ಪ್ರಕಾರ ಋಷಿ ಕಶ್ಯಪರು ಸೃಷ್ಟಿಸಿದ ಮಂದರ್ ಮತ್ತು ಪಾರಿಜಾತ ಮರಗಳ ಮಿಶ್ರ ತಳಿಯಾಗಿದೆ. ಅಂದಿನಿಂದ ಇಂದಿನವರೆಗೆ ಇದು ಸನಾತನ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

ಧಾರ್ಮಿಕ ವಿಶೇಷತೆಯುಳ್ಳ ಧರ್ಮಧ್ವಜವನ್ನು ಗುಜರಾತ್‌ನ ಅಹಮದಾಬಾದ್ ಮೂಲಕ ವಿಶೇಷ ಪ್ಯಾರಚೂಟ್- ಫ್ಯಾಬ್ರಿಕ್ ತಯಾರಕರು 25 ದಿನಗಳ ಅವಧಿಯನ್ನು ವ್ಯಯಿಸಿ, ಮೂರು ಪದರಗಳಲ್ಲಿ ಧ್ವಜವನ್ನು ತಯಾರಿಸಿದ್ದಾರೆ. ಅನೇಕ ವರ್ಷಗಳ ಕಾಲ ಬಾಳಿಕೆ ಬರುವಂತೆ ಗಟ್ಟಿಮುಟ್ಟಾದ ಪ್ಯಾರಚೂಟ್ ದರ್ಜೆಯ ವಸ್ತುವನ್ನು ಬಳಸಲಾಗಿದೆ. ಇದು ಕಠಿಣ ಸೂರ್ಯನ ಬಿಸಿಲು, ಮಳೆ ಮತ್ತು ಬಲವಾದ ಗಾಳಿಯನ್ನು ತಡೆದುಕೊಳ್ಳುವ ಪ್ರೀಮಿಯಂ ರೇಷ್ಮೆದಾರ ಮತ್ತು ಹೆಚ್ಚಿನ ಸಾಮರ್ಥ್ಯದ ಪ್ಯಾರಚೂಟ್ ಬಟ್ಟೆಯನ್ನು ಬಳಸಲಾಗಿದೆ. ಗಂಟೆಗೆ 60ಕಿ.ಮಿ ಗಾಳಿಯ ವೇಗವನ್ನು ತಡೆದುಕೊಳ್ಳುವ ಸಾಮರ್ಥ್ಯ ಈ ಧ್ವಜಕ್ಕಿದೆ. 191 ಅಡಿ ಎತ್ತರದ ಮಂದಿರದ ಶಿಖರದ ಮೇಲೆ ಸ್ಥಾಪಿಸಲಾದ 42 ಅಡಿ ಧ್ವಜಸ್ಥಂಭವನ್ನು 360 ಡಿಗ್ರಿ ತಿರುಗುವಂತೆ ವಿನ್ಯಾಸಗೊಳಿಸಲಾಗಿದೆ.

ಅಯೋಧ್ಯೆಯ ರಾಮಮಂದಿರದ ಮೇಲೆ ಹಾರಿಸಲಾದ ಭಗವದ್ಧ್ವಜವು ಆಧ್ಯಾತ್ಮಿಕ ಸಾಂಸ್ಕೃತಿಕ ಮತ್ತು ರಾಷ್ಟ್ರಚೇತನದ ದೃಷ್ಟಿಯಿಂದ ಅತ್ಯಂತ ಮಹತ್ವವೆನಿಸಿದೆ. ಇಂತಹ ಧರ್ಮಧ್ವಜದ ಮಹತ್ವ ಈ ಕೆಳಕಂಡಂತಿದೆ.

### ಧರ್ಮ, ಸಂಸ್ಕೃತಿ ಮತ್ತು ಪರಂಪರೆಯ ಪುನರುತ್ಥಾನ

ಭಗವದ್ಧ್ವಜವು ಹಿಂದೂ ಸಂಸ್ಕೃತಿಯಲ್ಲಿ ಧರ್ಮ ಸಂಸ್ಥಾಪನೆ, ಸತ್ಯ, ಶೌರ್ಯ ಮತ್ತು ತ್ಯಾಗಗಳ ಪ್ರತೀಕವಾಗಿದೆ. ಇದನ್ನು ರಾಮಮಂದಿರದ ಮೇಲೆ ಹಾರಿಸುವ ಮೂಲಕ ರಾಷ್ಟ್ರದ ಸಾವಿರಾರು ವರ್ಷಗಳ ನಾಗರೀಕ ಪರಂಪರೆಯ ಸ್ಮರಣೆಯನ್ನು ಪುನರುಜ್ಜೀವನಗೊಳಿಸುವ ಸಂಕೇತವಾಗಿದೆ.

### ರಾಮ ತತ್ವ ಜಯದ ಚಿಹ್ನೆ

ಭಗವದ್ಧ್ವಜವು ಧರ್ಮದ ವಿಜಯ. ಅಧರ್ಮದ ಮೇಲಿನ ಸತ್ಯದ ಜಯ. ಶ್ರೀರಾಮನ ರಾಮರಾಜ್ಯದ ಆದರ್ಶ ಮೌಲ್ಯಗಳು, ನೀತಿ, ನ್ಯಾಯ, ಸಮಾನತೆ ಇವುಗಳ ಚಿಹ್ನೆಯಾಗಿದೆ. ಧರ್ಮಧ್ವಜದ ಆರೋಹಣವನ್ನು ಸ್ವತಃ ಪ್ರಧಾನಮಂತ್ರಿಗಳೇ ನೆರವೇರಿಸಿದ್ದು ರಾಷ್ಟ್ರದ ಬದ್ಧತೆಯನ್ನು ವ್ಯಕ್ತಪಡಿಸುತ್ತದೆ.

### ರಾಷ್ಟ್ರ ಏಕತೆ ಮತ್ತು ಭಕ್ತಿಯ ಸಂಕೇತ

ಧರ್ಮಧ್ವಜದ ಹಾರಾಟ ಕೇವಲ ಧಾರ್ಮಿಕ ಕ್ರಿಯೆಯಲ್ಲ, ಬದಲಿಗೆ ಕೋಟ್ಯಾಂತರ ಭಕ್ತರ ಭಾವನೆ ಮತ್ತು ನಂಬಿಕೆಗೆ ಸಲ್ಲಿಸಿದ ಗೌರವ. ರಾಮಮಂದಿರದ ನಿರ್ಮಾಣಕ್ಕಾಗಿ ಶತಮಾನಗಳಷ್ಟು ಜನತೆ ತೋರಿದ ಶ್ರದ್ಧೆ ಸಹಿಷ್ಣತೆ ಮತ್ತು ಏಕತೆಯನ್ನು ಪ್ರತಿನಿಧಿಸುತ್ತದೆ.

### ಸಾಂಸ್ಕೃತಿಕ ಪುನರುಜ್ಜೀವನದ ಘಟ್ಟ

ಭಗವದ್ಧ್ವಜ ಹಾರಿಸುವುದು ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ

ಪುಟ 10 ಕ್ಕೆ ➤

# ಶ್ರೀ ಕೃ ನರಹರಿಯವರಿಗೆ ಶ್ರದ್ಧಾಂಜಲಿ ಮತ್ತು ರಾಜ್ಯ ಕಾರ್ಯಕಾರಿಣಿ ವರದಿ

**ನಾರಾಯಣ ಭಟ್ಟ,**
ರಾಜ್ಯ ಪ್ರಧಾನ ಕಾರ್ಯದರ್ಶಿ

ದಿನಾಂಕ:16.11.2025ರಂದು ಭಾನುವಾರ ಸಂಘದ ಕೇಂದ್ರ ಕಛೇರಿ 'ಯಾದವಸ್ಮೃತಿ'ಯಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ದಿವಂಗತ ಪ್ರೊ॥ ಕೃ ನರಹರಿಯವರ ಶ್ರದ್ಧಾಂಜಲಿ ಮತ್ತು ರಾಜ್ಯ ಕಾರ್ಯಕಾರಿಣಿ ಸಭೆ ಆಯೋಜನೆ ಮಾಡಲಾಗಿತ್ತು.

ಶಾರದಾ ಪ್ರಾರ್ಥನೆಯೊಂದಿಗೆ ಆರಂಭಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅನೇಕ ಹಿರಿಯರು ದಿವಂಗತ ಪ್ರೊ॥ ಕೃ ನರಹರಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ತಮ್ಮ ಗೌರವವನ್ನು ಸಮರ್ಪಿಸಿದರು.

ಶ್ರೀ ಗಂಗಾಧರಾಚಾರಿ, ರಾಜ್ಯ ಉಪಾಧ್ಯಕ್ಷರು ಇವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಚಿದಾನಂದ ಪಾಟೀಲ ರಾಜ್ಯ ಉಪಾಧ್ಯಕ್ಷರು ಇವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ 23 ವರ್ಷಗಳ ಕಾಲ ಶ್ರೀ ಕೃ ನರಹರಿಯವರ ಜೊತೆ ತಮ್ಮ ಒಡನಾಟವಿತ್ತು. ಶ್ರೀಯುತರ ವ್ಯಕ್ತಿತ್ವ ನನ್ನ ಮೇಲೆ ಅತ್ಯಂತ ಪ್ರಭಾವ ಬೀರಿದೆ. ಕಾರ್ಯಕರ್ತ ತಪ್ಪೆಸಗಿದಾಗ ಕೂಡಲೇ ತಿದ್ದಿತೀಡಿ ಮಾರ್ಗದರ್ಶನ ಮಾಡುತ್ತಿದ್ದರು, ಉತ್ತಮ ಸಂಘಟನೆ ಕಟ್ಟುವುದು, ಲೆಕ್ಕಪತ್ರ ನಿರ್ವಹಣೆ (ಲೆಕ್ಕ ಅಂದ್ರೆ ಪಕ್ಕಾ) ಇತ್ಯಾದಿ ಅನೇಕ ಸಂಗತಿಗಳನ್ನು ನೆನಪಿಸಿಕೊಂಡರು.

ಮಾಜಿ ವಿಧಾನಪರಿಷತ್ ಸದಸ್ಯರಾದ ಕ್ಯಾಪ್ಟನ್ ಶ್ರೀ ಗಣೇಶ್ ಕಾರ್ಣಿಕ್ ಮಾತನಾಡಿ ಇವರನ್ನು ನೋಡಿಯೇ ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವಾ ಎಂಬ ಸಂಘಗೀತೆ ರಚನೆಯಾದಂತಿದೆ. ಯಾವ ವಿಚಾರಕ್ಕಾಗಿ ಆದರ್ಶ ವ್ಯಕ್ತಿಯಾಗಿ ಬಾಳಿದರೋ ಅಂತಹ ಶ್ರೇಷ್ಠ ಆದರ್ಶಗಳ ರಕ್ಷಣೆ ನಮ್ಮೆಲ್ಲರ ಹೊಣೆ. ಸಂಘ ಶಿಕ್ಷಾ ವರ್ಗದಲ್ಲಿ ಅವರು ತೆಗೆದುಕೊಂಡ ಅವಧಿಯನ್ನು ಎಂದೂ ಮರೆಯಲಾರೆ ಎಂದು ಸ್ಮರಿಸುತ್ತಾ ತಮ್ಮ ನುಡಿನಮನವನ್ನು ಸಲ್ಲಿಸಿದರು.

ನಿವೃತ್ತ ಉಪಪ್ರಾಂಶುಪಾಲರು ಶಿಕ್ಷಕ ಸಂಘ ಮತ್ತು ಎಬಿಆರ್‌ಎಸ್‌ಎಂನ ಉಭಯ ಸಂಘಟನೆಗಳಲ್ಲಿ ಅನೇಕ ಜವಾಬ್ದಾರಿ ನಿರ್ವಹಿಸಿ ಮಾರ್ಗದರ್ಶನ ಮಾಡುತ್ತಿರುವ ಶ್ರೀಮತಿ ಸೀತಾಲಕ್ಷ್ಮಿ ಇವರು ನುಡಿನಮವನ್ನು ಸಲ್ಲಿಸುತ್ತಾ, ದಿವಂಗತ ಪ್ರೊ॥ ಕೃ ನರಹರಿಯವರ ಧ್ಯೇಯವೇ ನನಗೆ ಸ್ಫೂರ್ತಿ. ಸಂಘಟನೆ ಎಂದರೆ ಶ್ರೀ ಕೃ ನರಹರಿ, ವ್ಯವಹಾರದಲ್ಲಿ ಅಚ್ಚುಕಟ್ಟುತನ 14 ಸಂಸ್ಥೆಗಳ ಲೆಕ್ಕಪತ್ರ ನಿರ್ವಹಣೆ ಮಾಡುತ್ತಿದ್ದರು. ಶ್ರೀಯುತರ ಶಕ್ತಿ, ಸಾಮರ್ಥ್ಯಕ್ಕೆ ಎಣೆ ಎಂಬುದಿರಲಿಲ್ಲ. ಶಿಕ್ಷಕ ಸಂಘಕ್ಕೆ ಅಪಾರ ಕೀರ್ತಿ ಹಾಗೂ ಶಕ್ತಿಯನ್ನು ತುಂಬಿದವರು ಎಂಬುದಾಗಿ ಶ್ರೀಯುತರ ಗುಣಗಾನ ಮಾಡಿದರು.

ಶ್ರೇಷ್ಠ ಲೇಖಕಿ ಹಾಗೂ ನಿವೃತ್ತ ಕನ್ನಡ ಉಪನ್ಯಾಸಕಿ ನಂ ನಾಗಲಕ್ಷ್ಮಿಯವರು ಅತ್ಯಂತ ವಿನೀತ ಭಾವದಿಂದ ನುಡಿ ನಮನವನ್ನು ಸಲ್ಲಿಸುತ್ತಾ 'ಸಜ್ಜನರ ಸಂಘ ಹೆಜ್ಜೇನು ಸವಿದಂತೆ', ಶ್ರೀಯುತರ ಒಡನಾಟದ ಅನುಭವ ನನಗಾಗಿದೆ, ಶ್ರೀ ಕೃ ನರಹರಿ ಗುಣಗ್ರಾಹಿಗಳಾಗಿದ್ದರು ಎಂಬುದಾಗಿ ಸ್ಮರಿಸಿದರು.

ಹೀಗೆ ಶ್ರೀ ಚಂದ್ರಶೇಖರ ಸಿಲಿಕಾನ್ ಸಿಟಿ ಕಾಲೇಜಿನ ಮುಖ್ಯಸ್ಥರು, ಶ್ರೀ ಬಸವರಾಜು, ಶ್ರೀ ಕೊಟ್ರಪ್ಪ, ಶ್ರೀ ಮಹೇಶ್ ಬಸರಕೋಡ್, ಶ್ರೀ ಅನಿಲ್ ಬಿರಾದಾರ್, ಶ್ರೀ ಸುರೇಂದ್ರ, ಶ್ರೀ ಗಂಗಾಧರಾಚಾರಿ, ಚಂದ್ರಶೇಖರ್ ಪಾಟೀಲ್, ಎಂ.ವಿ ಗಂಗಾಧರ, ಗೋಪಣ್ಣ, ಮುಂತಾದ ಶಿಕ್ಷಕ ಸಂಘದ ಪದಾಧಿಕಾರಿಗಳು ಶ್ರೀ ಕೃ ನರಹರಿಯವರ ಜೊತೆ ಇರುವ ಒಡನಾಟ, ಅವರು ಮಾಡಿದ ಸಹಾಯ, ಮಾರ್ಗದರ್ಶನವನ್ನು ನೆನೆದು ಶ್ರೀಯುತರಿಗೆ ನುಡಿನಮನವನ್ನು ಸಲ್ಲಿಸಿದರು.

ಕಾರ್ಯಾಲಯ ಪ್ರಮುಖರು ಹಾಗೂ ಮಾಜಿ ರಾಜ್ಯ ಕೋಶಾಧ್ಯಕ್ಷರು ಆದ ಶ್ರೀ ಜೆ.ಎಂ ಜೋಶಿ ಇವರು ಹತ್ತಾರು ಘಟನೆಗಳನ್ನು ಮೆಲುಕು ಹಾಕುತ್ತಾ ಅನುದಾನಿತ ಸಂಸ್ಥೆಗಳ ಏಳಿಗೆಗೆ ಶ್ರೀ ಕೃ ನರಹರಿಯವರ ಸಹಾಯ, ಕೊಡುಗೆ ಮಾದರಿಯಾಗಿದೆ. ಕಾರ್ಯಕರ್ತರ ಹೆಸರು ಕರೆದು ಮಾತನಾಡಿಸುವ ಗುಣ ನಿಜಕ್ಕೂ ಸ್ಮರಣೀಯ. ಶ್ರೀ ನರಹರಿಯವರ ಬಗ್ಗೆ ಅಭಿಮಾನ ಹೊಂದಿದವರು ಸಹಸ್ರಾರು. ಗುಜರಾತಿನ ಅಹಮದಾಬಾದ್ ಅಧಿವೇಶನಕ್ಕೆ ಶ್ರೀಯುತರ ಜೊತೆ ಹೊರಟಾಗ ತಮ್ಮ ಲಗೇಜನ್ನು ಎಷ್ಟು ಕೇಳಿದರೂ, ವಿನಂತಿಸಿದರು ಸುತರಾಂ ಕೊಡಲಿಲ್ಲ ಎಂಬುದನ್ನು ಸ್ಮರಿಸಿಕೊಂಡ ಶ್ರೀ ಜೆ.ಎಂ ಜೋಶಿಯವರು ಶ್ರೀ ಕೃ ನರಹರಿ ನಿಜಕ್ಕೂ ನಭಕ್ಕೆ ಏರಿದ ವ್ಯಕ್ತಿ ಎಂಬುದಾಗಿ ಉಲ್ಲೇಖಿಸಿದರು. ಸಂಘದ ಹಿರಿಯರಾದ ಶ್ರೀ ನಾಗಭೂಷಣರಾವ್ , ಪೋಷಕರು ಮಾಧ್ಯಮಿಕ ಶಿಕ್ಷಕ ಸಂಘ ಇವರು ತಮ್ಮ ನುಡಿನಮನವನ್ನು ಸಲ್ಲಿಸುತ್ತಾ ಧ್ಯೇಯವನ್ನು ದೇಹವನ್ನಾಗಿ ಧರಿಸಿ ಬಂದವರು, ಸಂಘ ಹೇಳಿದಂತೆ ಚಾಚೂ ತಪ್ಪದೇ ತಮ್ಮ ಬದುಕನ್ನು ನಡೆಸಿದವರು, ಶಿಕ್ಷಕ ಸಂಘಟನೆ ರಾಜ್ಯದ ಎಲ್ಲಾ ಭಾಗಗಳಿಗೂ ವಿಸ್ತರಣೆ ಆಗಬೇಕೆಂದು ಸಂಕಲ್ಪತೊಟ್ಟ ಮಹನೀಯರು. ಶ್ರೀಯುತರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸೋಣ ಎಂಬುದಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಅವರು ಶ್ರೀ ಕೃ ನರಹರಿಯವರಿಗೆ ನುಡಿನಮನವನ್ನು ಸಲ್ಲಿಸುತ್ತಾ ಅವರ ಸಮಗ್ರ ಜೀವನವೇ ಸಮಾಜಕ್ಕೆ ಸಮರ್ಪಿತವಾಗಿತ್ತು ಎಂಬುದಾಗಿ ಸ್ಮರಿಸಿಕೊಂಡರು. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ನಾರಾಯಣ ಭಟ್ಟ ಕಾರ್ಯಕ್ರಮವನ್ನು ನಿರೂಪಿಸಿದರು.

ಭೋಜನೋತ್ತರ ರಾಜ್ಯ ಕಾರ್ಯಕಾರಿಣಿ ಅರ್ಥಪೂರ್ಣವಾಗಿ ನಡೆಯಿತು.

- ಹಿಂದಿನ ಸಭೆಯ ನಡಾವಳಿಯನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು.

**ಪುಟ 10 ಕ್ಕೆ ➢**

# ಭಾರತೀಯ ಇತಿಹಾಸದ ವಿಕೃತೀಕರಣ

(ಮುಂದುವರೆದದ್ದು)

■ ಕೃ. ನರಹರಿ

1950ರ ದಶಕದಲ್ಲಿ ನಡೆದ ಘಟನೆ. ಭಾರತದಿಂದ ಆಂಗ್ಲರು ಬಿಟ್ಟು ಹೋಗಿದ್ದರೂ ಪೋರ್ಚುಗೀಸರು ಗೋವಾದಲ್ಲಿ ಇನ್ನೂ ತಳ ಊರಿದ್ದರು, ಗೋವಾ ಸ್ವತಂತ್ರವಾಗಿರಲಿಲ್ಲ. ಪೋರ್ಚುಗೀಸರ ಹಿಂಸಾತ್ಮಕ ಹಾಗೂ ಮನೋವೇದಕ ಆಡಳಿತದಿಂದ ಬಿಡಿಸಿಕೊಂಡು ಗೋವಾವನ್ನು ಮುಕ್ತಗೊಳಿಸಲು ಅಲ್ಲೂ ಸ್ವಾತಂತ್ರ್ಯ ಚಳುವಳಿ ನಡೆದಿತ್ತು. ಆ ರೀತಿ ಚಳುವಳಿಯಲ್ಲಿ ಭಾಗವಹಿಸಿ ಬಂಧಿತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಶ್ರೀ ವಿಶ್ವನಾಥ ಲಾವಂದೆಯವರು ಗೋವಾ ಜೈಲಿನಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದರು. ಭಾರತದ ಎಲ್ಲೆಡೆ ಪ್ರವಾಸಮಾಡಿ ಗೋವಾದಲ್ಲಿ ಪೋರ್ಚುಗೀಸರಿಂದ ನಡೆಯುತ್ತಿರುವ ದಬ್ಬಾಳಿಕೆಯನ್ನು ವಿವರಿಸಿ ಗೋವಾವನ್ನು ಸ್ವತಂತ್ರಗೊಳಿಸಲು ಭಾರತ ಸರ್ಕಾರ ಅದರ ಮೇಲೆ ಪೋಲಿಸ್ ಕಾರ್ಯಾಚರಣೆಯನ್ನು ಮಾಡುವ ಅಗತ್ಯತೆಯ ಪ್ರಚಾರ ಮಾಡಿದರು. ಆ ಸಮಯದಲ್ಲಿ ಅವರು ಬೆಂಗಳೂರಿಗೆ ಬಂದಿದ್ದಾಗ ಅವರು ಕರೆದಿದ್ದ ಸಭೆಯಲ್ಲಿ ನಾನೂ ಭಾಗವಹಿಸಿದ್ದೆ. ಅಲ್ಲಿ ಸಭಿಕರೊಬ್ಬರು "ಗೋವಾದಲ್ಲಿ ಇಷ್ಟೊಂದು ದಬ್ಬಾಳಿಕೆ ನಡೆಯುತ್ತಿರುವ ಬಗ್ಗೆ ಶೀಘ್ರವಾಗಿ ಗೋವಾ ಮೇಲೆ ಪೋಲಿಸ್ ಕಾರ್ಯಾಚರಣೆಯ ಅವಶ್ಯಕತೆಯ ಬಗ್ಗೆ ನೀವು ಪ್ರಧಾನಮಂತ್ರಿ ನೆಹರೂರವರನ್ನು ಭೇಟಿ ಮಾಡಿ ಆಗ್ರಹ ಮಾಡಲಿಲ್ಲವೆ?" ಎಂದು ಪ್ರಶ್ನಿಸಿದರು. ' ನಾನು ನೆಹರೂರವರನ್ನು ಭೇಟಿ ಮಾಡಿದ್ದೆ, ಎಲ್ಲಾ ವಿವರಿಸಿ ಪೋಲಿಸ್ ಕಾರ್ಯಾಚರಣೆ ಒತ್ತಾಯಿಸಿದೆ. ಆಗ ಅವರ ಪ್ರತಿಕ್ರಿಯೆ "I am not going to sacrifice my International Prestige for the sake of few lakhs of Goaŋ" ಎಂದು ಇತ್ತು ಎಂದರು.

ನೆಹರೂರವರ ಸ್ವದೇಶಿ ಚಿಂತನೆಯ ವಿರೋಧಿ ಮಾನಸಿಕತೆಯ ಕಾರಣ ಹಾಗೂ ಕೆಲವರಿಂದ ಈ ಮಾನಸಿಕತೆಯ ದುರುಪಯೋಗದ ಕಾರಣ ಮೆಕಾಲೆ ನಿರ್ಮಿಸಿದ ಶಿಕ್ಷಣವು ಮುಂದುವರೆಯಲು ಹಾಗೂ ಅದರಲ್ಲಿ ಇನ್ನೂ ಹೆಚ್ಚಿನ ವಿಕೃತಿಗಳನ್ನು ಕಾಣಲು ಕಾರಣವಾಯಿತು.

## ಮಾರ್ಕ್ಸ್‌ವಾದಿಗಳ ಗುಪ್ತ ಯೋಜನೆ ಮತ್ತು ಸಂಚು

ಮಾರ್ಕ್ಸ್‌ವಾದಿ ಇತಿಹಾಸಕಾರರು ತಮ್ಮ ಪುಸಕ್ತಗಳಲ್ಲಿ ಆಗ್ಗಿಂದಾಗ್ಗೆ ಉಲ್ಲೇಖ ಮಾಡುವ ಮಾರ್ಕಿಸ್ಟ್ ಇತಿಹಾಸಕಾರ ಎಂದು ಮಾನ್ಯವಾಗಿರುವ ಯುರೋಪಿನ ಇತಿಹಾಸಕಾರ E.H. Car, ಇತಿಹಾಸದ ಬಗ್ಗೆ ಈ ರೀತಿ ಹೇಳಿದ್ದಾನೆ. "Each age must reinterprit the past in the light of its own preoccupation" ಎಂದು. (ಮಾರ್ಕ್ಸ್‌ವಾದಿಗಳ ಧ್ಯೇಯದಲ್ಲಿ ಇತಿಹಾಸ ಪುಸ್ತಕಗಳು ಅವರಿಗೆ ಅನುಕೂಲವಾಗುವಂತೆ, ಇತಿಹಾಸಕ್ಕೆ ಬಣ್ಣಹಚ್ಚಿ ಸಮಾಜವನ್ನು ಅವರಿಚ್ಚೆಯಂತೆ ಬದಲಾವಣೆ ಮಾಡುವ ಪ್ರಯತ್ನಕ್ಕೆ ಕೇಂದ್ರ ಸ್ಥಾನ ಕೊಡುವುದು ಪ್ರಮುಖ ಅಂಶ.) ಅದರ ಇತ್ತೀಚಿನ ಮಾದರಿ ಈ ರೀತಿ ಇದೆ. "If The society cannot changed it. Destroy the languages, the culture, the peoples way of life and everything which has evolved over several thousand years."

ಮೇಲಿನ ಮಾನಸಿಕತೆಯ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ರಾಷ್ಟ್ರೀಯ ಮನೋಭಾವ, ದೇಶಾಭಿಮಾನ, ನಮ್ಮ ಶ್ರೇಷ್ಠ ಪರಂಪರೆಯ ಬಗ್ಗೆ ಹೆಮ್ಮೆ ಬೆಳೆಯಬಾರದು ಎಂದೇ ಉದ್ದೇಶ ಹೊಂದಿದ್ದ ವಾಮ ಪಂಥೀಯರು ಮತ್ತು ಹಲವು ಮುಸಲ್ಮಾನರು ನೆಹರೂರವರ ವಿದೇಶೀ ಚಿಂತನೆಯ ಪೂರ್ಣ ದುರುಪಯೋಗ ಮಾಡಿಕೊಳ್ಳಲು ಯೋಜನೆ ರೂಪಿಸಿದರು. ಅಂತಹವರು ಕಾಂಗ್ರೆಸ್ ಪಕ್ಷವನ್ನು ಸೇರಿ ಕೇಂದ್ರ ಸರ್ಕಾರದ ಮಂತ್ರಿಗಳೂ ಆದರು, ಶಿಕ್ಷಣ ಮಂತ್ರಿಗಳೂ ಆದರು. ಅವರಲ್ಲಿ ಪ್ರಮುಖರೆಂದರೆ- ಕಾಶಿ ಮತ್ತು ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಹಿಂದೆ ಉಪಕುಲಪತಿಗಳಾಗಿದ್ದ ಡಾ॥ ಕೆ.ಎಲ್. ಶ್ರೀಮಾಲಿಯವರು, ವಿವೇಕಾನಂದ ಶಿಲಾಸ್ಮಾರಕಕ್ಕೆ ಮೊದಲ ವಿರೋಧ ವ್ಯಕ್ತಪಡಿಸಿದ ಹುಮಾಯೂನ್ ಕಬೀರರು ಹಾಗೂ ಬಿಹಾರ, ನಂತರ ಪಶ್ಚಿಮಬಂಗಾಳಗಳ ರಾಜ್ಯಪಾಲರಾಗಿದ್ದ ನುರುಲ್‌ಹಸನ್‌ರವರು.

ಇವರುಗಳು ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗಿನ ಶಿಕ್ಷಣದ ಬಗ್ಗೆ ಯೋಜಿಸಲು ನಿರ್ಮಿತವಾಗಿರುವ ಕೇಂದ್ರ ಸರ್ಕಾರದ National Council for Educational Research and Training (NCERT), ಮತ್ತು National Council for Research in Social Sciences, National Institute for Educational Planning and Administration (NIEPA) ಈ ಸಂಸ್ಥೆಗಳು ಹಾಗೂ ಹಲವು ವಿಶ್ವವಿದ್ಯಾಲಯಗಳಲ್ಲಿ, ವಾಮಪಂಥೀಯರು ಮತ್ತು ರಾಷ್ಟ್ರಪ್ರಜ್ಞೆಯನ್ನು ನಿರ್ಮಾಣ ಮಾಡಲು ವಿರೋಧವಿರುವ ಮುಸ್ಲಿಮರನ್ನು ನೇಮಕ ಮಾಡಲು ವಿಶೇಷ ಯೋಜನೆಯೊಂದನ್ನು ಕಾರ್ಯಗತ ಮಾಡಿದರು. ನುರುಲ್ ಹಸನ್‌ರಂತೂ ಸುಮಾರು 12 ವರ್ಷಗಳ ಕಾಲ ಕೇಂದ್ರದ ಶಿಕ್ಷಣ ಮಂತ್ರಿಗಳಾಗಿ ಮೇಲಿನ ಪಿತೂರಿಗಳಿಗೆ ಹೆಚ್ಚಿನ ಶಕ್ತಿ ತುಂಬಿದರು. ಈ ಮಂತ್ರಿಗಳು ಮತ್ತು ಅವರು ನೇಮಕ ಮಾಡಿದ ವಾಮಪಂಥೀಯ ಅಥವಾ ರಾಷ್ಟ್ರೀಯತಾ ವಿರೋಧಿ ವ್ಯಕ್ತಿಗಳು ಇಡೀ ದೇಶದ ಮುಂದಿನ ಪೀಳಿಗೆಗಳನ್ನು ಅರಾಷ್ಟ್ರೀಯಗೊಳಿಸುವ ಗುಪ್ತ ಯೋಜನೆ ಅಥವಾ 'Hidden Agenda' ವನ್ನು ತಮ್ಮ ಮುಂದೆ ಗುರಿಯಾಗಿ ಇಟ್ಟುಕೊಂಡು ತಮ್ಮ ಸಂಚನ್ನು ಕಾರ್ಯ ರೂಪಕ್ಕೆ ತರಲು ಉದ್ಯುಕ್ತರಾದರು.

ಉದಾಹರಣೆಗೆ NIEPA ಸಂಸ್ಥೆಗೆ ನಿರ್ದೇಶಕರಾಗಿ ಕಟ್ಟರ್ ಇಸ್ಲಾಮೀ ಹಾಗೂ ಮುಂದೆ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಮುನೀಸ್ ರಾಜಾ ಹಾಗೂ ನಂತರ ಕಮ್ಯುನಿಸ್ಟ್ ಪಕ್ಷದ ಕಾರ್ಡ್ ಹೋಲ್ಡರ್ (ಒಳವೃತ್ತದ ಕಾರ್ಯಕರ್ತ) ಆಗಿದ್ದ ಸತ್ಯಭೂಷಣರನ್ನು ನೇಮಕ ಮಾಡಿದ್ದರು. ಅದೇ ರೀತಿ NCERT ನಲ್ಲಿ ಇತಿಹಾಸ ಮತ್ತು ಸಮಾಜಶಾಸ್ತ್ರ ವಿಭಾಗಗಳು ಒಟ್ಟಿಗೆ ಇದ್ದು ಈ ವಿಭಾಗದ ಪ್ರಮುಖರನ್ನಾಗಿ ಶ್ರೀ ಎಸ್. ಹೆಚ್. ಖಾನ್‌ರನ್ನು ನೇಮಿಸಿದ್ದರು. ಇವರು 20 ವರ್ಷಗಳಿಗೂ ಮಿಕ್ಕಿ ಅಲ್ಲಿ ಸೇವೆ ಸಲ್ಲಿಸಿದ್ದರು. ಇವರಂತೂ ಬಹಿರಂಗವಾಗಿಯೇ "ನಮ್ಮ ದೇಶಕ್ಕೆ ನಾಗರೀಕತೆ ಬಂದಿದ್ದು ಮುಸಲ್ಮಾನರ ಆಗಮನದ ನಂತರವೇ; ಈ ದೇಶಕ್ಕೆ ಔರಂಗಜೇಬನಿಂದ ಅಪಾರವಾದ ಕೊಡುಗೆ ಇದೆ"- ಇತ್ಯಾದಿ

ಪುಟ 9 ಕ್ಕೆ ➤

➢ ಪುಟ 6 ರಿಂದ.....

ಭಾಷಣವನ್ನು ಮಾಡುತ್ತಿದ್ದವರು, ಇವರು ನಿವೃತ್ತರಾದ ನಂತರ ಕಮ್ಯುನಿಸ್ಟ್ ಪಕ್ಷದ ಮತ್ತೊಬ್ಬ ಕಾರ್ಡ್ ಹೋಲ್ಡರ್ ಆದ ಪ್ರೊ॥ ಅರ್ಜುನ್‌ದೇವ್‌ರವರು ಈ ಇಲಾಖೆಯ ಪ್ರಮುಖರಾಗಿದ್ದರು. NCERT ಮತ್ತು NIEPAಗಳಲ್ಲಿ ಸಾಕಷ್ಟು ವಿಕೃತಿಗಳನ್ನು ನಿರ್ಮಿಸಲು ಇವರುಗಳ ಪಾತ್ರ ಬಹಳ ಹಿರಿದು. ಇದು ಶಾಲಾ ಶಿಕ್ಷಣದ ಬಗ್ಗೆ ಇವರು ಮಾಡಿದ ಕುತಂತ್ರಗಳು.

## ಉನ್ನತ ಶಿಕ್ಷಣದಲ್ಲಿನ ಸಂಚು

ಮೇಲಿನ ರೀತಿಯೇ ರಾಷ್ಟ್ರ ಪ್ರಜ್ಞೆಯ ನಿರ್ಮಾಣದ ವಿರೋಧಿ ಜನಗಳನ್ನು ವಿಶ್ವವಿದ್ಯಾಲಯಗಳಲ್ಲಿ, ವಿಶೇಷವಾಗಿ ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಪ್ರತಿಕೋದ್ಯಮ ವಿಭಾಗಗಳಿಗೆ ನೇಮಕ ಮಾಡಲು ಮೇಲಿನ ಮಂತ್ರಿಗಳು ನೆರವಾದರು. ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಂತೂ (ಜೆಎನ್‌ಯು) ಮೇಲಿನ ವಿಭಾಗಗಳು ಪೂರ್ಣ ದೇಶದ್ರೋಹೀ ವಿಭಾಗಗಳೆಂದೇ ಎಣಿಸಬಹುದು.

ರೊಮೆಲಾಥಾಪರ್, ಸತೀಶ್ ಚಂದ್ರ, ಆರ್.ಎಸ್. ಶರ್ಮಾ, ಎಸ್. ಗೋಪಾಲ್, ಬಿಪಿನ್ ಚಂದ್ರ ಇತ್ಯಾದಿ ಎಲ್ಲರೂ ಜೆಎನ್‌ಯುನ ಇತಿಹಾಸ ವಿಭಾಗದ ವಾಮಪಂಥೀಯ ಪ್ರಾಧ್ಯಾಪಕರು, ಅಲಿಘರ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಮುಖ ಹಬೀಬ್ ಇರ್ಫಾನ್‌ರಂತೂ ಕಟ್ಟರ್ ಮುಸಲ್ಮಾನ ಮತ್ತು ಹಿಂದೂ ದ್ವೇಷಿ. ಬೆಂಗಳೂರು ವಿಶ್ವವಿದ್ಯಾಲಯುದ ಇತಿಹಾಸ ವಿಭಾಗದ ಪ್ರಮುಖರಾಗಿದ್ದವರೂ ವಾಮಪಂಥೀಯರೇ. ಇದೇ ರೀತಿ ದೆಹಲಿ ಮತ್ತು ಅನೇಕ ವಿಶ್ವವಿದ್ಯಾಲಯಗಳಲ್ಲಿ ಯೋಜನಾಪೂರ್ವಕವಾಗಿ, ರಾಜಾಶ್ರಯ ಪಡೆದು ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಪತ್ರಿಕೋದ್ಯಮ ಈ ವಿಭಾಗಗಳಿಗೆ ವಾಮಪಂಥೀಯರು ನುಗ್ಗಿದ್ದಾರೆ. ಇವರು ಉನ್ನತ ಶಿಕ್ಷಣದಲ್ಲೂ ರಾಷ್ಟ್ರೀಯ ಸ್ವಾಭಿಮಾನ, ಈ ದೇಶದ ಸ್ವಂತಿಕೆಗಳು ನಿರ್ಮಾಣವಾಗದಂತೆ ಹಾಗೂ ಹಿಂದೂಗಳಲ್ಲಿ ಕೀಳರಿಮೆ ಬರುವಂತೆ ಲೇಖನಗಳು, ಪುಸ್ತಕಗಳು ಮತ್ತು ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುವಂತೆ ಮಾಡಿದ್ದಾರೆ.

## ಸಂಶೋಧನಾ ಕ್ಷೇತ್ರದಲ್ಲಿ

ಸಂಶೋಧನಾ ಕ್ಷೇತ್ರದಲ್ಲೂ ಇವರ ಕುತಂತ್ರ ಕೆಲಸ ಮಾಡಿದೆ. Indian Council for Historical Research (ICHR) ಮತ್ತು Indian History Congress ಸಂಸ್ಥೆಗಳಲ್ಲಿ ಎಲ್ಲ ಸದಸ್ಯರೂ ವಾಮ ಪಂಥೀಯರಿರುವಂತೆ ಎಚ್ಚರಿಕೆ ವಹಿಸಲಾಯಿತು.

ಇವರು ಇತಿಹಾಸದ ಪುಸ್ತಕದಲ್ಲಿ ನೈಜ ಇತಿಹಾಸದಲ್ಲಿ ಬಿಂಬಿಸದೆ, ದೇಶ ವಿರೋಧಿ, ಹಿಂದೂ ವಿರೋಧಿ, ರಾಷ್ಟ್ರೀಯತೆಯ ವಿರೋಧಿಯಾಗಿ ತಮ್ಮದೇ ಕಾಲ್ಪನಿಕ ಭಾಷ್ಯಗಳನ್ನು ಬರೆದು ವಿದ್ಯಾರ್ಥಿಗಳಲ್ಲಿ ವಿಕೃತ ವಿಚಾರಗಳನ್ನು ತುಂಬಲು ಪ್ರಾರಂಭಿಸಿದರು. NCERT ನವರು ಪಠ್ಯವಿಷಯ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ರಚನೆಯ ಬಗ್ಗೆ ಮಾರ್ಗ ಸೂಚಿಗಳನ್ನು ತಯಾರಿಸಿ ಈ ವಿಕೃತ ರಾಷ್ಟ್ರ ವಿರೋಧೀ ಪ್ರಾಧ್ಯಾಪಕರುಗಳಿಗೆ ವಿಮರ್ಶೆಗಾಗಿ ಕಳುಹಿಸುವುದು, ಅವರು ಆ ಮಾರ್ಗ- ಸೂಚಿಗಳನ್ನು ಇನ್ನಷ್ಟು ವಿಕೃತಗೊಳಿಸುವುದು, ನಂತರ ಅವನ್ನು ಕಾರ್ಯಗತ ಮಾಡಲು ಎಲ್ಲಾ ರಾಜ್ಯಗಳ ಶಿಕ್ಷಣ ಮತ್ತು ಸಂಶೋಧನಾ ವಿಭಾಗಗಳಿಗೆ ಕಳುಹಿಸಿಕೊಡುವುದು ಈ ರೀತಿ ವ್ಯವಸ್ಥಿತ ಪಿತೂರಿ ಈ ವಾಮಪಂಥೀಯರ ಗುಪ್ತ ಯೋಜನೆಯಂತೆ ಮುಂದುವರೆಯಿತು.

## ಇತಿಹಾಸ ವಿಕೃತಿಯ ಕೆಲವು ಉದಾಹರಣೆಗಳು

ಇವರು ಮಾಡಿರುವ ಕೆಲವು ವಿಕೃತಿಗಳನ್ನು ಮಾತ್ರ ಇಲ್ಲಿ ಉದಾಹರಣೆಯ ರೂಪದಲ್ಲಿ ಕೊಡಲಾಗಿದೆ.

1. ಸ್ವಾತಂತ್ರ್ಯ ಹೋರಾಟಗಾರರಾದ ಚಂದ್ರಶೇಖರ ಆಜಾದ್, ಭಗತ್‌ಸಿಂಗ್, ವೀರಸಾವರ್‌ಕರ್, ಲೋಕಮಾನ್ಯ ತಿಲಕರು, ಅರವಿಂದರು, ಛತ್ರಪತಿ ಶಿವಾಜಿ ಇವರುಗಳನ್ನು ಭಯೋತ್ಪಾದಕರು ಎಂದು ಬಣ್ಣಿಸಲ್ಪಟ್ಟಿದೆ.
2. ಹಿಂದು ರಾಜರುಗಳ ಬಗ್ಗೆ ತಿರಸ್ಕಾರ, ಅಗೌರವ ಬರುವಂತೆ ಭಾಷ್ಯ ಬರೆದಿದ್ದಾರೆ. ಸ್ವಾಭಿಮಾನದ ಪ್ರತ್ಯಕ್ಷ ಮೂರ್ತಿ ರಾಣಾ ಪ್ರತಾಪರು ಅಕ್ಬರ್ ಮಾಡಿದ ಹಿಂದು ಮುಸ್ಲಿಂ ಏಕತೆಯ ಪ್ರಯತ್ನಕ್ಕೆ ಅಡ್ಡಿಪಡಿಸಿದ ವ್ಯಕ್ತಿ ಎಂದು ಬಣ್ಣಿಸಲಾಗಿದೆ.
3. ಹಿಂದು ಸಾಮಾಜಿಕ ವ್ಯವಸ್ಥೆಯೇ ದೇಶದ ಅವನತಿಗೆ ಕಾರಣ ಎಂದು ಇವರ ಬಣ್ಣನೆ. ಇವರು ಮನುಸ್ಮೃತಿ ಇತ್ಯಾದಿ ಗ್ರಂಥಗಳ ಬಗ್ಗೆ ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಭಾಷ್ಯ ಬರೆದು ಜನಗಳನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಬೆಂಗಳೂರಿನ ಪತ್ರಿಕಾಗೋಷ್ಠಿಯೊಂದರಲ್ಲಿ, ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳಾಗಿದ್ದ ಶ್ರೀ ಮುರಳಿ ಮನೋಹರ ಜೋಷಿಯವರಿಗೆ ವಾಮಪಂಥೀಯ ಪತ್ರಕರ್ತನೊಬ್ಬ ಮನುಸ್ಮೃತಿಯ ಬಗ್ಗೆ ತಿರಸ್ಕಾರದ ಪ್ರಶ್ನೆ ಕೇಳಿದಾಗ ಶ್ರೀ ಜೋಷಿಯವರು "ನೀವು ಸಂಸ್ಕೃತ ಬಲ್ಲಿರಾ? ಬರದಿದ್ದರೆ ಸಂಸ್ಕೃತ ಕಲಿತು ಆ ಭಾಷೆಯಲ್ಲಿರುವ ಮನುಸ್ಮೃತಿಯ ಮೂಲ ಪ್ರತಿಯನ್ನು ಓದಿ ನಂತರ ಮಾತನಾಡಿರಿ. ಪ್ರಾಯಶಃ ಮಾರ್ಕ್ಸ್‌ವರು ಇದರ ಬಗ್ಗೆ ಬರೆದಿರುವ ಭಾಷ್ಯವನ್ನು ಓದಿ ಈ ರೀತಿ ಮಾತನಾಡುತ್ತಿದ್ದೀರಿ" ಎಂದು ಘರ್ಜಿಸಿದರು. ಆ ಪತ್ರಿಕಾಕರ್ತ ಏನೂ ಉತ್ತರ ಕೊಡಲಾಗದೆ ತೆಪ್ಪಗಾದ. ವಾಮಪಂಥೀಯರ ವರ್ಗ ಸಂಘರ್ಷ ನೀತಿಗೆ ಪೋಷಕವಾಗಿ ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡುವ ಇವರು ಹುಟ್ಟುಹಾಕಿದ ಒಂದಂಶ ಮಾತ್ರ ಇದು. ವಾಸ್ತವವಾಗಿ ಹಿಂದು ಸಂಸ್ಕೃತಿಯು ಸಾಮರಸ್ಯದ ಸಂಸ್ಕೃತಿಯಾಗಿದ್ದು ಪಾಶ್ಚಿಮಾತ್ಯರು ನಂಬಿರುವಂತೆ "Survival of the Fittest" ಸಿದ್ಧಾಂತದಲ್ಲಿ ಅಥವಾ ಸಾಮಾಜಿಕ ಸಂಘರ್ಷದಲ್ಲಿ ನಂಬಿಕೆಯನ್ನು ಇಟ್ಟಿಲ್ಲ.
4. ರಾಮಕೃಷ್ಣ ಪರಮಹಂಸರನ್ನು ಇವರು ಪಠ್ಯಪುಸ್ತಕದಲ್ಲಿ ಅರೆಹುಚ್ಚ ಎಂದು ಕರೆದಿದ್ದಾರೆ. ಜೈನ ಗುರುಗಳಾದ ಭಗವಾನ್ ಮಹಾವೀರರು ಈ ರೀತಿ ಇತಿಹಾಸಕಾರರು ಮಕ್ಕಳಿಗೆ ಪರಿಚಯಿಸುವ ರೀತಿ ನೋಡಿ! " ಮಹಾವೀರರು 12 ವರ್ಷಗಳ ಕಾಲ ಉಟ್ಟ ಬಟ್ಟೆಯನ್ನು ಬದಲಾಯಿಸದೆ ಊರು, ಕಾಡುಗಳನ್ನು ಸುತ್ತುತ್ತಿದ್ದರು. 12 ವರ್ಷಗಳ ನಂತರ ಆ ಉಟ್ಟ ಬಟ್ಟೆಯನ್ನೂ ಬಿಚ್ಚಿ ಹಾಕಿಬಿಟ್ಟರು" ಎಂದು. ಭಗವಾನ್ ಮಹಾವೀರ ಇಂದ್ರಿಯ ನಿಗ್ರಹ, ತ್ಯಾಗ, ಸಮರ್ಪಣೆ, ಅಹಿಂಸೆ, ಸಮಾಜಸೇವೆ, ಅನುಕಂಪ, ಆಧ್ಯಾತ್ಮಿಕತೆ ಇತ್ಯಾದಿ ಯಾವುದನ್ನೂ ಉಲ್ಲೇಖಮಾಡದೆ ಅವರೊಬ್ಬ ಬುದ್ಧಿಕೆಟ್ಟ ವ್ಯಕ್ತಿ ಎನ್ನುವಂತೆ ಮಕ್ಕಳ ಮುಂದೆ ಬಣ್ಣಿಸಿದ್ದಾರೆ.

(ಮುಂದುವರೆಯುವುದು...)

➢ ಪುಟ 4 ರಿಂದ.....

ಹೀಗೆ ಸನ್ಯಾಸಿಗಳ ಮೊದಲ ಹೋರಾಟದಲ್ಲಿ ಜಯವು ಪ್ರಾಪ್ತಿಯಾಗುತ್ತದೆ. ತರಬೇತಿಯೇ ಇಲ್ಲದ ಸನ್ಯಾಸಿಗಳ ತಂಡವು ತನ್ನ ದೃಢ ಸಂಕಲ್ಪ ಮತ್ತು ಅಖಂಡವಾದ ಆತ್ಮವಿಶ್ವಾಸದ ಬಲದಿಂದಲೇ ತರಬೇತಿ ಹೊಂದಿ, ಸಶಸ್ತ್ರರಾಗಿಯೂ ಇದ್ದ ಬ್ರಿಟಿಷರ ಸೈನ್ಯವನ್ನು ಪರಾಭವಗೊಳಿಸಿರುತ್ತದೆ. ಮಹೇಂದ್ರ ಮತ್ತು ಕಲ್ಯಾಣಿ ತಮಗಾಗಿ ಹೊಸದಾದ ಮನೆಯೊಂದನ್ನು ನಿರ್ಮಿಸಿಕೊಳ್ಳುವ ಮೂಲಕ ಕಥೆ ಮುಕ್ತಾಯಗೊಳ್ಳುತ್ತದೆ.

'ವಂದೇ ಮಾತರಂ' ಗೀತೆ ಅಂದು ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರಲ್ಲಿ ದೇಶಪ್ರೇಮವನ್ನು ಬಡಿದೆಬ್ಬಿಸಿದ್ದು ಮಾತ್ರವಲ್ಲ, ಈ ಗೀತೆಯ ಸಾಲುಗಳಲ್ಲಿ ವ್ಯಕ್ತವಾಗಿರುವ ಭಾರತದ ಭೌಗೋಳಿಕ, ಸಾಂಸ್ಕೃತಿಕ ಸಂಪತ್ತನ್ನು ಕುರಿತಾದ ಹೆಮ್ಮೆಯ ಭಾವವು ಇಂದಿಗೂ ಹೇಳುತ್ತಿದ್ದಂತೆ, ಕೇಳುತ್ತಿದ್ದಂತೆ ಮೈನವಿರೇಳುವಂತೆ ಮಾಡುತ್ತವೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಅನೇಕ ವರ್ಷಗಳವರೆಗೆ ಈ ಗೀತೆಯ ಮೊದಲೆರಡು ಚರಣಗಳನ್ನು ರಾಷ್ಟ್ರಗೀತೆಯನ್ನಾಗಿಸಿಕೊಳ್ಳಲಾಗಿತ್ತು. ಅದು ಕೇವಲ ಒಂದು ಹಾಡಾಗಿರಲಿಲ್ಲ, ಭಾರತದ ಸ್ವಾತಂತ್ರ್ಯ ಹೋರಾಟದ ಆತ್ಮವೇ ಆಗಿತ್ತು. ಎಲ್ಲೆಲ್ಲೂ ಮೊಳಗುತ್ತಿದ್ದ ವಂದೇಮಾತರಂ ಬ್ರಿಟಿಷರ ನಿದ್ದೆಯನ್ನೇ ಕಸಿದುಕೊಂಡಿತ್ತು.

ಈ ಗೀತೆಯ ರಚನೆಯ ಹಿಂದೆ ಒಂದು ಕುತೂಹಲಕಾರಿ ಕಥೆಯಿದೆ. ಬ್ರಿಟಿಷ್ ಆಡಳಿತಗಾರರು ಪ್ರತಿ ಸಮಾರಂಭದಲ್ಲಿ ತಮ್ಮ ರಾಣಿಗೆ ಗೌರವ ಸಲ್ಲಿಸುವ 'ಸೇವ್ ದಿ ಕ್ವೀನ್' ಎಂಬ ಹಾಡನ್ನು ಹಾಡುವುದನ್ನು ಕಡ್ಡಾಯಗೊಳಿಸಿದ್ದರು. ಅದು ಬಂಕಿಮಚಂದ್ರರೂ ಸೇರಿದಂತೆ ಅನೇಕ ದೇಶಭಕ್ತರನ್ನು ಕೆರಳಿಸಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಅವರು 1874 ರಲ್ಲಿ 'ವಂದೇ ಮಾತರಂ' ಎಂಬ ತಮ್ಮ ಜನ್ಮಭೂಮಿಯನ್ನು ಕುರಿತ ಹಾಡನ್ನು ರಚಿಸಿದ್ದರು. ಭಾರತಭೂಮಿಯನ್ನು ಅವರು 'ತಾಯಿ' ಎಂದು ಸಂಬೋಧಿಸಿದ್ದರು. ಅದನ್ನೇ ನಂತರ 'ಆನಂದಮಠ' ಕಾದಂಬರಿಯಲ್ಲಿ ಸೇರಿಸಿ, ಅದು ದೇಶದಲ್ಲಿಯೇ ರಾಷ್ಟ್ರೀಯತೆಯ ಚೈತನ್ಯವನ್ನು ಜಾಗೃತಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು.

ಭಾರತಮಾತೆಯು ತನ್ನ ಸುಂದರವಾದ ಮಂದಸ್ಮಿತದ ಮುಖದೊಂದಿಗೆ ಪ್ರೀತಿಯ ಕಟಾಕ್ಷವನ್ನು ಬೀರುತ್ತಾ, ತನ್ನೆಲ್ಲ ಮಕ್ಕಳನ್ನು ರಕ್ಷಿಸುತ್ತಿದ್ದಾಳೆಂಬ ಭಾವವನ್ನು ಮೂಡಿಸುವ 'ವಂದೇಮಾತರಂ' ಗೀತೆಯ ನೂರೈವತ್ತನೇ ಜನ್ಮದಿನಾಚರಣೆಯ ಶುಭದಿನಗಳಲ್ಲಿ ಅದರ ನಿತ್ಯನೂತನತೆಯ ವೈಶಿಷ್ಟ್ಯವನ್ನು ಸಂಭ್ರಮಿಸುತ್ತಾ, ಮೊದಲಿಗೆ ಅದಕ್ಕೆ ಅದ್ಭುತವಾದ ರಾಗ ಸಂಯೋಜನೆಯನ್ನು ಮಾಡಿದ ರವೀಂದ್ರನಾಥ ಟ್ಯಾಗೋರ್ ಅವರನ್ನೂ ಸ್ಮರಿಸುತ್ತಾ ಭಾರತಮಾತೆಯ ಪದತಲದಲ್ಲಿ ಭಕ್ತಿಯಿಂದ ನಮಿಸೋಣ.

**ಶ್ರೇಯಸ್ಸಿನ ಮಾರ್ಗ ಹಾಗೂ ಪ್ರೇಯಸ್ಸಿನ ಮಾರ್ಗ (ಪ್ರಿಯವಾದ ವಸ್ತುಗಳು) ಇವೆರಡೂ ಬೇರೆ ಬೇರೆ. ಶ್ರೇಯಸ್ಸನ್ನು ಆರಿಸಿಕೊಂಡವನಿಗೆ ಒಳ್ಳೆಯದಾಗುತ್ತದೆ, ಪ್ರೇಯಸ್ಸನ್ನು ಆರಿಸಿಕೊಳ್ಳುವವನು ಪುರುಷಾರ್ಥದಿಂದ ಚ್ಯುತಿ ಹೊಂದಿ ಪತಿತನಾಗುತ್ತಾನೆ.**

**– ಕಠೋಪನಿಷತ್**

➢ ಪುಟ 5 ರಿಂದ.....

ಸಮರ್ಪಿತವಾಗಲಿ ಎಂಬ ಉತ್ತುಂಗ ಧ್ಯೇಯ ಭಾರತೀಯರೆದುರಿಗೆ ತೆರೆದಿಡಬೇಕು" ಎಂಬ ವಿಚಾರ ಅವರ ಮನದಾಳದಲ್ಲಿ ಸ್ಫುರಿತವಾಯ್ತು.

ಅವರ ಈ ವಿಚಾರಧಾರೆ ಅವರ ಲೇಖನಿಯಿಂದ 1825ರಲ್ಲಿ ಕಾವ್ಯ ರೂಪದಲ್ಲಿ ಪ್ರಕಟಗೊಂಡಿತು. ಅದೇ 'ವಂದೇಮಾತರಂ' ಗೀತೆ. ಅದನ್ನು ಆ ನಂತರ ತಮ್ಮ 'ಆನಂದಮಠ' ಕಾದಂಬರಿಯಲ್ಲಿ ಸೇರಿಸಿದರು. ಅದೊಂದು ಗೀತೆಯಾಗಿರಲಿಲ್ಲ. ಮಹಾಮಂತ್ರವೇ ಆಗಿತ್ತು. ಕಾದಂಬರಿಯಲ್ಲಿ 'ಭವಾನಂದ' ನೆಂಬ ಸಂನ್ಯಾಸಿಯ ಧ್ವನಿಯಾಗಿ ಬಂದ ಆ ಹಾಡು ಭಾರತದ ಕೋಟಿ ಕೋಟಿ ಕಂಠಗಳಿಂದ ಪ್ರತಿಧ್ವನಿತವಾಯ್ತು. ಆ ನಾದ ತರಂಗಗಳು ಇಮ್ಮಡಿ, ಮುಮ್ಮಡಿ, ನೂರ್ಮಡಿಯಾಗಿ ಮೊಳಗಿ ಬ್ರಿಟೀಷ್ ಸಿಂಹಾಸನವನ್ನು ಅಲುಗಾಡಿಸಿತು. ಮಂತ್ರ ರೂಪಪಡೆದ ಆ ಗೀತೆ ಬಂಕಿಮರನ್ನು 'ಮಂತ್ರದ್ರಷ್ಟಾರ'ರನ್ನಾಗಿ ಮಾಡಿತು. ಬಂಕಿಮರು ಕೇವಲ ಮನುಷ್ಯರಾಗಿರದೆ ಭಾರತದ ಋಷಿ ಪರಂಪರೆಯಲ್ಲಿ ಆಧುನಿಕ ಋಷಿಯಾಗಿ ಕಂಗೊಳಿಸಿದರು.

ವಿಶ್ವಕವಿ ರವೀಂದ್ರರು ಆ ಋಷಿಪುಂಗವನನ್ನು ಮೊದಲ ಬಾರಿ ಕಂಡಾಗ "ಬಂಗಾಲದ ಶ್ರೇಷ್ಠ ವಿದ್ವಜ್ಜನರ ಸಮ್ಮುಖದಲ್ಲೂ ಎದ್ದು ತೋರುವ ಅವ್ಯಕ್ತ ರಾಜಲಕ್ಷಣವನ್ನು ಆತನ ಲಲಾಟದಲ್ಲಿ ಗುರುತಿಸಿದೆ" ಎಂದು ವರ್ಣಿಸಿದ್ದಾರೆ.

ಯೋಗಿ ಅರವಿಂದರು ಹೇಳಿದ ಮಾತು " ಮಹರ್ಷಿ ಆದವನು ಮಾತ್ರ ಮಂತ್ರದಾತನಾಗಬಲ್ಲನು' 'ವಂದೇ ಮಾತರಂ' ಜನ್ಮದಾತನಾದ ಬಂಕಿಮಚಂದ್ರರು ಆಧುನಿಕ ಕಾಲದ ಮಹರ್ಷಿಯೇ ಸರಿ".

➢ ಪುಟ 6 ರಿಂದ.....

ಪುನರುಜ್ಜೀವನದ ಐತಿಹಾಸಿಕ ಘಟ್ಟ. ಅಯೋಧ್ಯೆಯ ರಾಮಮಂದಿರದ ಪುನರ್ ನಿರ್ಮಾಣವು ಕೇವಲ ಮಂದಿರದ ನಿರ್ಮಾಣವಲ್ಲ, ಬದಲಿಗೆ ಹಿಂದೂ ನಾಗರೀಕತೆ, ಸಂಸ್ಕೃತಿ ಮತ್ತು ಪರಂಪರೆಯ ಗೌರವ ಆತ್ಮವಿಶ್ವಾಸ ಮತ್ತು ಆತ್ಮಗೌರವದ ಪುನರ್ ಸ್ಥಾಪನೆಯಾಗಿದೆ.

ಭಾರತದ ಭಾಗ್ಯವಿದಾತ, ಧರ್ಮಪುತ್ರ ಶ್ರೀ ನರೇಂದ್ರ ಮೋದಿಯವರು ಧ್ವಜಾರೋಹಣ ನೆರವೇರಿಸಿದ್ದು ಅಕ್ಷರಶಃ ಇಡೀ ರಾಷ್ಟ್ರಕ್ಕೆ ಸಂತಸ ತಂದಿದೆ. "ಜೈ ಶ್ರೀ ರಾಮ್" ●

➢ ಪುಟ 7 ರಿಂದ.....

- ಜಿಲ್ಲಾವಾರು ಸದಸ್ಯತಾ ಅಭಿಯಾನದ ವರದಿ ಪಡೆಯಲಾಯಿತು.
- ಚಳಿಗಾಲದ ಅಧಿವೇಶನದಲ್ಲಿ ಶಿಕ್ಷಣ ಮತ್ತು ಶಿಕ್ಷಕರ ಸಮಸ್ಯೆಗಳ ಬಗ್ಗೆ, ಹೋರಾಟದ ಕುರಿತು ರೂಪುರೇಷೆಗಳನ್ನು ನಿರ್ಣಯಿಸಲಾಯಿತು.
- ಪ್ರತಿಭಾ ಪುರಸ್ಕಾರದ ಮತ್ತು ಜಿಲ್ಲಾ ಪ್ರವಾಸದ ವಿಷಯವಾಗಿ ರಾಜಸ್ಥಾನದಲ್ಲಿ ನಡೆದ ಪ್ರಾಂತ ಅಧಿವೇಶನದ ವರದಿಯನ್ನು ಮಂಡಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಇವರು ಸಭೆಯ ಅಧ್ಯಕ್ಷತೆ ವಹಿಸಿ ಸುಗಮವಾಗಿ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ನಡೆಸಿಕೊಟ್ಟರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್ಟರು ಸಭೆಯ ಕಲಾಪಗಳನ್ನು ನಿರ್ವಹಿಸಿದರು. ●

# ವಂದೇ ಮಾತರಂ 150ರ ಸಂಭ್ರಮ

ಪ್ರಸ್ತುತ ರಾಷ್ಟ್ರಗೀತೆಯನ್ನು ಭಾರತದ ಪ್ರಸಿದ್ಧ ಸಾಹಿತಿ ಶ್ರೀ ಬಂಕಿಮಚಂದ್ರ ಚಟ್ಟೋಪಾಧ್ಯಾಯ ಅವರು ರಚಿಸಿದ "ಆನಂದಮಠ' ಎಂಬ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇದೇ ಗೀತೆಯು ಕ್ರಾಂತಿಕಾರಿಗಳಿಗೆ ಸ್ಫೂರ್ತಿ ಮಂತ್ರವಾಗಿತ್ತು.

## ವಂದೇ ಮಾತರಂ– ಬಂಕಿಮ ಚಂದ್ರಚಟರ್ಜಿ

ವಂದೇ ಮಾತರಂ ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ ವಂದೇ ಮಾತರಂ
ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಪುಲ್ಲ ಕುಸುಮಿತ ದ್ರುಮದಲ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ, ವಂದೇ ಮಾತರಂ

ಕೋಟಿ ಕೋಟಿ ಕಂಠ  ಕಲಕಲ ನಿನಾದ ಕರಾಲೇ
ಕೋಟಿ ಕೋಟಿ ಭುಜೈರ್ಧೃತ ಖರ ಕರವಾಲೇ
ಅಬಲಾ ಕೆನೊ ಮಾ ಎತೋ ಬಲೆ
ಬಹುಬಲಧಾರಿಣೀಂ ನಮಾಮಿ ತಾರಿಣೀಂ
ರಿಪುದಲ ವಾರಿಣೀಂ ಮಾತರಂ ವಂದೇ ಮಾತರಂ

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಮರ್ಮ
ತ್ವಂಹಿ ಪ್ರಾಣಾಃ ಶರೀರೇ
ಬಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಯಿ ಪ್ರತಿಮಾ ಗಡಿ
ಮಂದಿರೇ ಮಂದಿರೇ ವಂದೇ ಮಾತರಂ

ತ್ವಂಹಿ ದುರ್ಗಾ ದಶಪ್ರಹರಣ ಧಾರಿಣೀ
ಕಮಲಾ ಕಮಲದಳ ವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿತ್ವಾಂ ನಮಾಮಿ ಕಮಲಾಂ
ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ ವಂದೇ ಮಾತರಂ
ಶ್ಯಾಮಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ ವಂದೇ ಮಾತರಂ

## ವಂದೇ ಮಾತರಂ ಗೀತೆ– ಕನ್ನಡ ಭಾಷಾಂತರ

ದಿವಂಗತ ಶಿವರಾಮು, ಖ್ಯಾತ ಲೇಖಕರು

### "ತಾಯೇ ವಂದಿಸುವೆ"

ತಾಯೇ ವಂದಿಸುವೆ
ಜಲಭರಿತೆ ಫಲಭರಿತೆ
ತೆಂಕಣದ ತಂಬೆಲರ ಸರಿತೆ
ಸೊಂಪಿಡಿದ ಪೈರುಪಚ್ಚೆಯ ತವರ್ಮನೆಯೆ ಹೇ ತಾಯೇ!
ಬೆಳ್ದಿಂಗಳಲಿ ಮಿಂದು ಮಿರುಗುವಿರುಳನುಟ್ಟವಳೆ
ಹೂ ಚಿಗುರು ಮುಡಿದ ತರುಲತೆಗಳನೆ ತೊಟ್ಟವಳೆ
ಇನಿನಗೆಯ ಜೇನ್ದನಿಯ
ಸುಖದಾತೆ ವರದಾತೆ, ಹೇ ಮಾತೆ

ಕಂಠಕೋಟಿಯ ಸಿಂಹಘರ್ಜನೆ ಸಿಡಿಸಿ
ಬಾಹುಕೋಟಿಯ ಶಸ್ತ್ರಚಾಲನೆ ನಡೆಸಿ
ರೌದ್ರರೂಪವ ತಳೆವ ಭೈರವಿಯೆ
ನೀನು ಅಬಲೆಯೆ ತಾಯೇ?
ಸರ್ವಬಲ ಸಂಪನ್ನೆ
ಶರಣು ಅಭಯಾವರಣೆ
ವೈರಿಕುಲ ಧ್ವಂಸಿನಿಯೇ, ತಾಯೇ!
ನೀ ವಿದ್ಯೆ ನೀ ಧರ್ಮ
ಹೃದಯ ನೀನಾತ್ಮ
ಒಡಲೊಳಾಡುವ ಪ್ರಾಣ ನೀನೆ
ಬಾಹುಗಳ ಸ್ಫುರಿಸುತಿಹ ಶಕ್ತಿ
ಹೃದಯಗಳ ಸ್ಪಂದಿಸಿಹ ಭಕ್ತಿ
ಗುಡಿಗುಡಿಯ ಗರ್ಭದಲ್ಲಿ ನಿಂದು
ಪೂಜೆಗೊಳುತಿಹ ಮೂರ್ತಿ ನೀನೆ

ನೀ ದುರ್ಗೆ ಈರೈದು ಕೈದುಗಳನಾಡಿಸುವೆ
ನೀ ಕಮಲೆ  ಕಮಲದಲದಂಗಣದಿ ಕ್ರೀಡಿಸುವೆ
ವಾಣಿ! ವಿದ್ಯಾಸುಧೆಯ ನೂಡುತಿಹೆ
    ನಿನಗಿದೋ ಪಡುಮಡವೆ
    ಶತನಮನ ಸಿರಿಯೊಡತಿ
    ಪರಿಶುದ್ಧೆ ಎಣೆರಹಿತೆ
    ಜಲಭರಿತ ಫಲಭರಿತೆ ಓ, ಮಾತೆ
    ವಂದಿಸುವೆ ತಾಯೇ!
ಶ್ಯಾಮಲೆ ಸರಳೆ
ಸುಸ್ಮಿತೆ ಸಾಲಂಕೃತೆ
ಸಕಲ ಸಂಪನ್ಮೂಲೆ
ಸರ್ವಸಮೃದ್ಧಿಯಾಗರಳೆ ತಾಯೆ!

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-12-2025 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಶ್ರೀ ಕೃ. ನರಹರಿ ಜೀ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಮತ್ತು ರಾಜ್ಯ ಕಾರ್ಯಕಾರಿಣಿ ಸಭೆ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com